# 49ನೇ ಮಂಡಳಿ ಸಭೆಯ ಕಾರ್ಯಸೂಚಿಗಳು (1-19)

**49/1 – 48ನೇ ಮಂಡಳಿ ಸಭೆಯ ನಡವಳಿಗಳನ್ನು ಓದುವುದು ಮತ್ತು ದಾಖಲಿಸುವುದು:**

ದಿನಾಂಕ 21/09/2021ರಂದು ಜರುಗಿದ 48ನೇ ಸಭೆಯ ಕರಡು ನಡವಳಿಯನ್ನು ಮಂಡಳಿಯ ಎಲ್ಲಾ ಸದಸ್ಯರಿಗೆ ದಿ:23/09/2021ರಂದು ರವಾನಿಸಲಾಗಿದ್ದು, ಈ ಬಗ್ಗೆ ಆಯುಕ್ತರು, ಆಯುಷ್ ಇಲಾಖೆರವರು ನಡವಳಿಯನ್ನು ತಿದ್ದುಪಡಿಗೊಳಿಸಿ ದಿನಾಂಕ 27/09/2021ರಂದು ಮಂಡಳಿಗೆ ಕಳುಹಿಸಿರುತ್ತಾರೆ. ಅದರಂತೆ, ನಡವಳಿಯಲ್ಲಿ ತಿದ್ದುಪಡಿಗೊಳಿಸಿ ದಿನಾಂಕ 07/10/2021ರಂದು ಅಂತಿಮ ನಡವಳಿಯನ್ನು ಮಂಡಳಿಯ ಎಲ್ಲಾ ಸದಸ್ಯರಿಗೆ ರವಾನಿಸಲಾಗಿದ್ದು ಈ ಬಗ್ಗೆ ಯಾವುದೇ ತಿದ್ದುಪಡಿ ಬಂದಿಲ್ಲದ ಕಾರಣ ಈ ನಡವಳಿಗಳನ್ನು ಓದಿ ದಾಖಲಿಸಲಾಗಿದೆ. **(ಅನುಬಂಧ-1)(20-44)**

**49/2 – 48ನೇ ಮಂಡಳಿ ಸಭೆಯ ನಡವಳಿಯ ಮೇಲೆ ಕೈಗೊಂಡ ಕ್ರಮಗಳು:**

48ನೇ ಮಂಡಳಿ ಸಭೆಯ ನಡವಳಿಯ ಮೇರೆಗೆ ಕೈಗೊಂಡ ಕ್ರಮಗಳನ್ನು ಸಭೆಗೆ ಮಂಡಿಸಲಾಗಿದೆ. **(ಅನುಬಂಧ-2)** (45-65)

**49/3 – (ಅ) ಸೆಪ್ಟೆಂಬರ್ 2021 ರಿಂದ ಡಿಸೆಂಬರ್ 2021ರವರೆಗೆ ಮಂಡಳಿಯು ಹಮ್ಮಿಕೊಂಡ ಸಭೆಗಳು, ತರಬೇತಿಗಳು, ಕಾರ್ಯಾಗಾರಗಳು, ಕ್ಷೇತ್ರ ಭೇಟಿ ಹಾಗೂ ವಿಡಿಯೋ ಕಾನ್‌ಫರೆನ್ಸ್‌ಗಳು**

| | | |
|---|---|---|
| 1 | 21/09/2021 | ಮಂಡಳಿಯ 48ನೇ ಸಭೆ |
| 2 | 05/10/2021 | ರಾಮನಗರದ ರಾಮೇದೇವರ ಬೆಟ್ಟದಲ್ಲಿ ಅಂತರರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ |
| 3 | 28/10/2021 | ವಿಡಿಯೋ ಕಾನ್‌ಫರೆನ್ಸ್, ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಚೆನ್ನೈ |
| 4 | 11/11/2021<br>12/11/2021 | ಕರ್ನಾಟಕ ಔಷಧೀಯ ಗಿಡಮೂಲಿಕೆಗಳ ಪ್ರಾಧಿಕಾರದವರು ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸಹಯೋಗದೊಂದಿಗೆ ಕಲ್ಬುರ್ಗಿ ವೃತ್ತದ ಅರಣ್ಯ ಅಧಿಕಾರಿಗಳು ಮತ್ತು ಮುಂಚೂಣಿ ಸಿಬ್ಬಂದಿಗೆ ಔಷಧೀಯ ಸಸ್ಯಗಳ ಸಂರಕ್ಷಣೆ, ಸುಸ್ಥಿರ ನಿರ್ವಹಣೆ ಹಾಗೂ ಜೈವಿಕವೈವಿಧ್ಯ ಅಧಿನಿಯಮ 2002ರ ಕುರಿತು ಕಾರ್ಯಾಗಾರ. |
| 5 | 18/11/2021 ರಿಂದ 22/11/2021ರ ವರೆಗೆ | ಲಕನೌನ CSIR-CIMAPಗೆ ಭೇಟಿ ನೀಡಿ ಅಲ್ಲಿನ ನಿರ್ದೇಶಕರಾದ ಡಾ. ಸಂಜಯ್ ಕುಮಾರ್ ಹಾಗೂ ಪ್ರಧಾನ ವಿಜ್ಞಾನಿ ಆರ್ ಕೆ. ಶ್ರೀವಾಸ್ತವರೊಡನೆ ಔಷಧೀಯ ಸಸ್ಯಗಳ ಕೃಷಿ, ಕೊಯ್ಲು, ನಂತರದ ನಿರ್ವಹಣೆ, ಮಾದರಿ ವಿಶ್ಲೇಷಣೆ, ಮಾರುಕಟ್ಟೆ ಬೆಳೆಸುವ ಚಟುವಟಿಕೆಗಳ ಕುರಿತು ಚರ್ಚೆ |

| | | |
|---|---|---|
| 6 | 23/11/2021 | ನವದೆಹಲಿಗೆ ಭೇಟಿ ನೀಡಿ ಅಲ್ಲಿ ಎನ್.ಎಂ.ಪಿ.ಬಿ ಕಛೇರಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಡನೆ ಎನ್.ಎಂ.ಪಿ.ಬಿ ಯೋಜನೆಯ ತಯಾರಿ ಹಾಗೂ ಪ್ರಸ್ತಾವನೆಯನ್ನು ಸಲ್ಲಿಸುವ ಕುರಿತು ಚರ್ಚೆ. |
| 7 | 25/11/2021 | |
| 8 | 30/11/2021 | ವಿಡಿಯೋ ಕಾನ್‌ಫರೆನ್ಸ್, ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಚೆನ್ನೈ |
| 9 | | ಜನತಾ ಜೀವವೈವಿಧ್ಯ ದಾಖಲಾತಿಯ ಮೌಲ್ಯಮಾಪನ ಸಮಿತಿ ಸಭೆ |
| 10 | 07/12/2021 | ಕರ್ನಾಟಕ ಔಷಧೀಯ ಗಿಡಮೂಲಿಕೆಗಳ ಪ್ರಾಧಿಕಾರದವರು ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸಹಯೋಗದೊಂದಿಗೆ ಚಾಮರಾಜನಗರ ವೃತ್ತದ ಅರಣ್ಯ ಅಧಿಕಾರಿಗಳು ಮತ್ತು ಮುಂಚೂಣಿ ಸಿಬ್ಬಂದಿಗೆ ಔಷಧೀಯ ಸಸ್ಯಗಳ ಸಂರಕ್ಷಣೆ, ಸುಸ್ಥಿರ ನಿರ್ವಹಣೆ ಹಾಗೂ ಜೈವಿಕವೈವಿಧ್ಯ ಅಧಿನಿಯಮ 2002ರ ಕುರಿತು ಕಾರ್ಯಾಗಾರ. |
| 11 | 23/12/2021 | ಕರ್ನಾಟಕ ಔಷಧೀಯ ಗಿಡಮೂಲಿಕೆಗಳ ಪ್ರಾಧಿಕಾರ ಹಾಗೂ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸಹಯೋಗದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನಲ್ಲಿ ಆಯೋಜಿಸಿರುವ ಕರ್ನಾಟಕ ಮೂಲಿಕೆ ಉತ್ಸವ ಮತ್ತು ಪಾರಂಪರಿಕ ವೈದ್ಯ ಸಮ್ಮೇಳನದ ಕಾರ್ಯಾಗಾರ. |
| 12 | 28/12/2021 | ಕರ್ನಾಟಕ ಔಷಧೀಯ ಗಿಡಮೂಲಿಕೆಗಳ ಪ್ರಾಧಿಕಾರ ಹಾಗೂ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸಹಯೋಗದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಆಯೋಜಿಸಿರುವ ಬೆಂಗಳೂರು ವೃತ್ತದ ಅರಣ್ಯ ಅಧಿಕಾರಿಗಳ ಮತ್ತು ಮುಂಚೂಣಿ ಸಿಬ್ಬಂದಿಗೆ ಔಷಧೀಯ ಸಸ್ಯಗಳ ಸಂರಕ್ಷಣೆ, ಸುಸ್ಥಿರ ನಿರ್ವಹಣೆ ಹಾಗೂ ಜೈವಿಕವೈವಿಧ್ಯ ಕಾಯ್ದೆ 2002 ರ ಕುರಿತ ಕಾರ್ಯಾಗಾರ. |
| 13 | 29/12/2021 | ವಿಡಿಯೋ ಕಾನ್‌ಫರೆನ್ಸ್, ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಚೆನ್ನೈ |

**49/3 – (ಆ) ಮಂಡಳಿಯ ಸನ್ಮಾನ್ಯ ಅಧ್ಯಕ್ಷರಾದ ಮಾನ್ಯ ಶ್ರೀ ಅನಂತ ಹೆಗಡೆ ಅಶೀಸರರವರು ಸೆಪ್ಟೆಂಬರ್ 2021 ರಿಂದ ಡಿಸೆಂಬರ್ 2021ರವರೆಗೆ ಹಮ್ಮಿಕೊಂಡ ಸಭೆಗಳು, ತರಬೇತಿಗಳು, ಕಾರ್ಯಾಗಾರಗಳು, ಕ್ಷೇತ್ರ ಭೇಟಿ ಹಾಗೂ ವಿಡಿಯೋ ಕಾನ್‌ಫರೆನ್ಸ್‌ಗಳು:**

| | |
|---|---|
| 07-09-2021 | ದಿನಾಂಕ:07/09/2021 ರಂದು ಬೆಳಗ್ಗೆ 11:15 ಕ್ಕೆ ತಾಲ್ಲೂಕು ಪಂಚಾಯತ್ ಮುಂಡಗೋಡಿನಲ್ಲಿ ಕಾರ್ಯನಿರ್ವಹಣಾಧಿಕಾರಿಗಳು ಮುಂಡಗೋಡು, ತಹಸೀಲ್ದಾರ್ ಮುಂಡಗೋಡು, ಎ.ಸಿ.ಎಫ್ ಟೆರಿಟೋರಿಯಲ್, ಆರ್.ಎಫ್.ಒ (ಸಾಮಾಜಿಕ ಅರಣ್ಯ), ಆರ್.ಎಫ್.ಒ (ಪ್ರಾದೇಶಿಕ ವಿಭಾಗ), ಕಿರು ನೀರಾವರಿ ಅಧಿಕಾರಿಗಳು, ತಾಲ್ಲೂಕು ಕೃಷಿ ಅಧಿಕಾರಿಗಳು, ತಾಲ್ಲೂಕು |

| | |
|---|---|
| | ತೋಟಗಾರಿಕಾಧಿಕಾರಿಗಳು, ತಾಲ್ಲೂಕು ಪಶು ಸಂಗೋಪನಾ ಇಲಾಕೆ ಅಧಿಕಾರಿಗಳು, ಪಟ್ಟಣ ಪಂಚಾಯತ್ ಮುಖ್ಯ ಅಧಿಕಾರಿಗಳು ಇವರುಗಳ ಜೊತೆ ಪರಿಸರ, ಅರಣ್ಯ, ಜೀವವೈವಿಧ್ಯ ಸಂರಕ್ಷಣೆ ಕುರಿತು ಸಮಾಲೋಚನೆ ನಡೆಸಲಾಯಿತು. ಮುಂಡಗೂಡು ತಾಲ್ಲೂಕು ಪಂಚಾಯತ್‌ನ ಎಲ್ಲಾ ಪಿ.ಡಿ.ಒಗಳನ್ನು, ಮಾನ್ಯ ಶಾಸಕರನ್ನು, ಶ್ರೀ ವಿ.ಸಿ ಪಾಟೀಲ್‌ರನ್ನು ಆಹ್ವಾನಿಸಲಾಗಿತ್ತು. |
| 13-09-2021 | ದೂರದರ್ಶನ-ಚಂದನದವರ ಮೂಲಕ ಅರಣ್ಯ ಕರಾವಳಿ ಜೀವವೈವಿಧ್ಯ ಪರಿಸರರಕ್ಷಣೆ ಕುರಿತು ಯಶೋಗಾಥೆ ಚಿತ್ರೀಕರಣ, ಸಂದರ್ಶನಕ್ಕಾಗಿ ದಿನಾಂಕ: 13-09-2021 ರಂದು ಬೆಳಗ್ಗೆ 10 ಘಂಟೆಗೆ ಕುಮಟಾ ಎ.ಸಿ.ಎಫ್, ಅರಣ್ಯ ಇಲಾಖೆ ಕಛೇರಿಗೆಯಲ್ಲಿ ದೂರದರ್ಶನದ ವಿಶೇಷ ಜಿಲ್ಲಾ ವರದಿಗಾರರು ಸಂದರ್ಶನದಲ್ಲಿ ಕರಾವಳಿ ಹಸಿರು ಕವಚ ವಿಷಯ ಚಿತ್ರೀಕರಣಿಸಲಾಯಿತು. ಬೀಚ್‌ಗೆ ಸಿಕ್ಕ ಅಂತರರಾಷ್ಟ್ರೀಯ ಮಾನ್ಯತೆ, ಆಮೆ ಸಂಕುಲ ಅಭಿವೃದ್ಧಿ ಕಾಂಡ್ಲಾ ಮಹತ್ವ, ಅಳಿವೆ ಮಹತ್ವ ಕುರಿತು ಚಿತ್ರೀಕರಣ ಮಾಡಲಾಯಿತು. ಈ ಬಗ್ಗೆ ಡಾ||. ಪ್ರಕಾಶ್ ಮೇಸ್ತ ಹಾಗೂ ಡಿ.ಸಿ.ಎಫ್ ಅಥವಾ ಎ.ಸಿ.ಎಫ್, ಡಾ||. ಸುಭಾಸ್‌ಚಂದ್ರನ್, ಓರ್ವ ಮೀನುಗಾರರು ಓರ್ವ ರೈತರ ಜೊತೆ (ಗಜನಿ ಭತ್ತ) ಸಂದರ್ಶನ ಮಾಡಲಾಯಿತು. |
| 24-09-2021 | ದಿನಾಂಕ: 24-09-2021 ರಂದು ಬೆಳಗ್ಗೆ 10:30ಕ್ಕೆ ಸಾಗರ ನಗರ ಸಭೆ ಕಛೇರಿಯಲ್ಲಿ ನಗರ ಸಭಾ ಕಮೀಷನರ್ ಅವರ ಜೊತೆಗೆ ಜೀವವೈವಿಧ್ಯ ಕಾರ್ಯಚಟುವಟಿಕೆ ಬಗ್ಗೆ ಸಮಾಲೋಚಿಸಲಾಯಿತು. |
| 01-10-2021 | ದಿನಾಂಕ:01/10/2021 ರಂದು 11:15ಕ್ಕೆ ತಾಲ್ಲೂಕು ಪಂಚಾಯತ್ ಮುಂಡಗೋಡಿನಲ್ಲಿ ಕಾರ್ಯನಿರ್ವಹಣಾಧಿಕಾರಿಗಳು ಮುಂಡಗೋಡು, ತಹಸೀಲ್ದಾರ್ ಮುಂಡಗೋಡು, ಎ.ಸಿ.ಎಫ್ ಟೆರಿಟೋರಿಯಲ್, ಆರ್.ಎಫ್.ಒ (ಸಾಮಾಜಿಕ ಅರಣ್ಯ), ಆರ್.ಎಫ್.ಒ (ಪ್ರಾದೇಶಿಕ ವಿಭಾಗ), ಕಿರು ನೀರಾವರಿ ಅಧಿಕಾರಿಗಳು, ತಾಲ್ಲೂಕು ಕೃಷಿ ಅಧಿಕಾರಿಗಳು, ತಾಲ್ಲೂಕು ತೋಟಗಾರಿಕಾಧಿಕಾರಿಗಳು, ತಾಲ್ಲೂಕು ಪಶು ಸಂಗೋಪನಾ ಇಲಾಕೆ ಅಧಿಕಾರಿಗಳು, ಪಟ್ಟಣ ಪಂಚಾಯತ್ ಮುಖ್ಯ ಅಧಿಕಾರಿಗಳು ಇವರುಗಳ ಜೊತೆ ಪರಿಸರ ಅರಣ್ಯ ಜೀವವೈವಿಧ್ಯ ಸಂರಕ್ಷಣೆ ಮತ್ತು ಅಭಿವೃದ್ಧಿ ಕುರಿತು ಸಮಾಲೋಚನೆ ನಡೆಸಲಾಯಿತು. ಮುಂಡಗೂಡು ತಾಲ್ಲೂಕು ಪಂಚಾಯತ್‌ನ ಎಲ್ಲ ಪಿ.ಡಿ.ಒಗಳನ್ನು ಆಹ್ವಾನಿಸಲಾಗಿತ್ತು. |
| 23-10-2021 | ದಿನಾಂಕ: 23-10-2021 ರಂದು ಸಾಗರದಲ್ಲಿ ಜೀವವೈವಿಧ್ಯ ಮಂಡಳಿ ಅಧ್ಯಕ್ಷ ಶ್ರೀ ಅನಂತ ಹೆಗಡೆ ಅಶೀಸರ ಅವರು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಶ್ರೀ ಕೆ. ವೆಂಕಟೇಶ್ ಅವರ ಜೊತೆ ಸಮಾಲೋಚನೆ ಸಭೆ ಏರ್ಪಡಿಸಲಾಗಿತ್ತು. |
| 26-10-2021 | ದಿನಾಂಕ: 26-10-2021 ರಂದು ಬೆಳಗ್ಗೆ 10:30ಕ್ಕೆ ಯಲ್ಲಾಪುರತಾಲ್ಲೂಕು ಪಂಚಾಯತ್‌ಗೆ ಭೇಟಿ ನೀಡಿ, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳ ಜೊತೆ ಮಾದರಿ ಜೀವವೈವಿಧ್ಯ ನಿರ್ವಹಣಾ |

| | |
|---|---|
| | ಸಮಿತಿ ಬಗ್ಗೆ ವಿವರವಾಗಿ ಚರ್ಚಿಸಲಾಯಿತು. ಯಲ್ಲಾಪುರ ವಲಯ ಅರಣ್ಯಾಧಿಕಾರಿಗಳು (ಪ್ರಾದೇಶಿಕ) ವಲಯ ಅರಣ್ಯಾಧಿಕಾರಿಗಳು (ಸಾಮಾಜಿಕ ಅರಣ್ಯ), ತಾಲ್ಲೂಕು ತೋಟಗಾರಿಕಾಧಿಕಾರಿಗಳು, ತಾಲ್ಲುಕು ಶಿಕ್ಷಣಾಧಿಕಾರಿಗಳು (ಬಿ.ಇ.ಓ) ಇವರುಗಳು ಪಾಲ್ಗೊಂಡಿದ್ದರು. |
| 28-10-2021 | ದಿನಾಂಕ: 28-10-2021 ರಂದು ಬೆಳಗ್ಗೆ 10:30 ಘಂಟೆಗೆ ಭಟ್ಕಳದ ಟ್ರೀ ಪಾರ್ಕ್‌ನಲ್ಲಿ ಸಮಾಲೋಚನಾ ಸಭೆ ಕಾರ್ಯಾಗಾರ ಏರ್ಪಡಿಸಲಾಗಿದೆ. ಕರಾವಳಿ 3 ಜಿಲ್ಲೆಗಳ ಟೆರಿಟೋರಿಯಲ್ ಡಿ.ಸಿ.ಎಫ್‌ಗಳು, ಸಿ.ಆರ್.ಜೆಡ್ ಡಿ.ಸಿ.ಎಫ್‌ಗಳು ಹಾಗೂ ಡಾ॥ ರಾಮಚಂದ್ರ ಭಟ್ (ಕಾಸರಕೋಡು ಹೊನ್ನಾವರ), ಡಾ॥. ಸುಭಾಸ್‌ಚಂದ್ರನ್ (ಕುಮಟಾ), ಡಾ॥. ಕೇಶವ್ ಕೊರ್ಸೆ (ಶಿರಸಿ), ಡಾ॥. ಮಹಾಬಲೇಶ್ವರ ಹೆಗಡೆ (ಕಾರವಾರ), ಡಾ॥. ಶಿವಕುಮಾರ ಹರಗಿ (ಕಾರವಾರ), ಡಾ॥. ಪ್ರಕಾಶ್ ಮೇಸ್ತ (ಹೊನ್ನಾವರ) ಡಾ॥. ವಿ.ಎನ್. ನಾಯಕ್ (ಅಂಕೋಲಾ) ಇವರನ್ನು ಆಹ್ವಾನಿಸಲಾಗಿತ್ತು.<br>ಕಾರ್ಯಾಗಾರದ ವಿವರ: ಚಂಡಮಾರುತ ಸಮುದ್ರ ಕೊರೆತ, ಮತ್ಸ್ಯಕ್ಷಾಮ ಇತ್ಯಾದಿ ಗಂಭೀರವಾದ ಕರಾವಳಿಯ ಪರಿಸರ, ಅರಣ್ಯ, ಜೀವವೈವಿಧ್ಯ ಸಮಸ್ಯೆಗಳಿಗೆ ದೀರ್ಘಕಾಲಿನ ಪರಿಹಾರ ಕಂಡುಕೊಳ್ಳುವ ಕುರಿತು, ಕರಾವಳಿ ಜಿಲ್ಲೆಗಳ ಅರಣ್ಯ ಪರಿಸರ ಇಲಾಖೆ ಅಧಿಕಾರಿಗಳು ತಜ್ಞರಜೊತೆ ಸಮಾಲೋಚನೆ ಕಾರ್ಯಾಗಾರ. |
| 02-11-2021 | ದಿನಾಂಕ: 02-11-2021 ರಂದು ಬೆಳಗ್ಗೆ 10:30 ಘಂಟೆಗೆ ಶಿರಸಿಯ ಮರಾಠಿಕೊಪ್ಪ ಅಜಿತ ಮನೋಚೇತನ ವಿಕಾಸ ವಿಶೇಷ ಮಕ್ಕಳ ಶಾಲಾ ಆವರಣದಲ್ಲಿ ಉತ್ತರ ಕನ್ನಡ ಜಿಲ್ಲೆಯ ವಿಶೇಷ ಮಕ್ಕಳ ಶಾಲೆಗಳ ಶಿಕ್ಷಕರು, ಪಾಲಕರು, ಸಂಸ್ಥೆಗಳ ಸಮಾವೇಶ, ತರಬೇತಿ ಕಾರ್ಯಾಗಾರ ಏರ್ಪಡಿಸಲಾಗಿತ್ತು. ಶ್ರೀ ಅನಂತ ಹೆಗಡೆ ಅಶೀಸರ ಜೀವವೈವಿಧ್ಯ ಮಂಡಳಿ ಅಧ್ಯಕ್ಷರು ಈ ಕಾರ್ಯಾಗಾರದ ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಾಯಿತು. |
| 11-11-2021 | 11-11-2021ರ ಬೆಳಗ್ಗೆ 9:30ಕ್ಕೆ ಕಾಸರಕೋಡನಲ್ಲಿ ಕಾಂಡ್ಲಾ ಸಂರಕ್ಷಣೆ-ಸಂವರ್ಧನೆ ಕುರಿತ ರಾಷ್ಟ್ರೀಯ ವಿಚಾರ ಸಂಕೀರ್ಣದಲ್ಲಿ ಭಾಗವಹಿಸಲಾಯಿತು.<br>ಮಧ್ಯಾಹ್ನ 4 ಘಂಟೆಗೆ ತಾಲ್ಲೂಕು ಪಂಚಾಯತ್ ಕಛೇರಿ ಸಿದ್ದಾಪುರ ಇಲ್ಲಿಗೆ ಭೇಟಿ ನೀಡಿ, ಕಾರ್ಯನಿರ್ವಹಣಾಧಿಕಾರಿಗಳು ಸಿದ್ದಾಪುರ, ವಲಯ ಅರಣ್ಯಾಧಿಕಾರಿಗಳು ಸಿದ್ದಾಪುರ (ಪ್ರಾದೇಶಿಕ), ವಲಯ ಅರಣ್ಯಾಧಿಕಾರಿಗಳು ಸಿದ್ದಾಪುರ (ಸಾಮಾಜಿಕಅರಣ್ಯ), ತಾಲ್ಲೂಕು ತೋಟಗಾರಿಕಾಧಿಕಾರಿ, ಬಿ.ಇ.ಓ ಸಿದ್ದಾಪುರ ಇವರ ಜೊತೆ ತಾಲ್ಲೂಕು ಜೀವವೈವಿಧ್ಯ ಸನ್ಮಾನ, ಘೋಷಣಾ ಫಲಕಗಳು, ಹಸಿರು ಶಾಲೆ ಘೋಷಣೆ, ಮಹಿಳಾ ಸ್ವಾತಂತ್ರ ವನ, ಕತ್ತಲೆಕಾನು, ಆಯುರ್ವೇದ ಪುನಶ್ಚೇತನ ಕಾಲೇಜಿನಲ್ಲಿ ಔಷಧೀ ಸಸ್ಯ ನರ್ಸರಿ/ಗಿಡ ಬೆಳೆಸುವುದು ಇತ್ಯಾದಿ ಮಾದರಿ ಜೀವವೈವಿಧ್ಯ ಸಮಿತಿ ಕಾರ್ಯಗಳ ಬಗ್ಗೆ ಸಮಾಲೋಚಿಸಲಾಯಿತು. |

**49/4 – ಕರ್ನಾಟಕ ಜೀವವೈವಿಧ್ಯ ಮಂಡಳಿಯ ಪುನರ್‌ರಚನೆ:**

ಜೈವಿಕವೈವಿಧ್ಯ ಅಧಿನಿಯಮ 2002ರ ಪ್ರಕರಣ 22 (4)ರನ್ವಯ ಅಧ್ಯಕ್ಷರು, ಐವರು ಪದನಿಮಿತ್ತ ಸದಸ್ಯರುಗಳು ಹಾಗೂ ಐವರು ಅಧಿಕಾರೇತರ ಸದಸ್ಯರುಗಳನ್ನೊಳಗೊಂಡು ಒಟ್ಟು 11 ಸದಸ್ಯರಿರಬೇಕಾಗುತ್ತದೆ.

ಪ್ರಸ್ತುತ ಕರ್ನಾಟಕ ಜೀವವೈವಿಧ್ಯ ಮಂಡಳಿಯಲ್ಲಿ ಪದನಿಮಿತ್ತ ಹಾಗೂ ಅಧಿಕಾರೇತರ ಸದಸ್ಯರುಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ. ಸಂ. | **ಪ್ರಸ್ತುತ ಮಂಡಳಿಯ ಪದನಿಮಿತ್ತ ಸದಸ್ಯರುಗಳ ವಿವರ (ಸರ್ಕಾರದ ಆದೇಶ ಸಂಖ್ಯೆ: ಅಪಜೀ 203 ಇಎನ್‌ವಿ 2016, ಬೆಂಗಳೂರು ದಿನಾಂಕ 13/02/2017)** |
|---|---|
| 1 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು |
| 2 | ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ (ಅರಣ್ಯ ಕಾರ್ಯಪಡೆ ಮುಖ್ಯಸ್ಥರು), ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು |
| 3 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಜೀವಿಪರಿಸ್ಥಿತಿ ಮತ್ತು ಪರಿಸರ) ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು |
| 4 | ಆಯುಕ್ತರು, ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ (ಆಯುಷ್) ಧನ್ವಂತರಿ ರಸ್ತೆ, ಆನಂದ್‌ರಾವ್ ವೃತ್ತ, ಬೆಂಗಳೂರು. |
| | **ಪ್ರಸ್ತುತ ಮಂಡಳಿಯ ಅಧಿಕಾರೇತರ ಸದಸ್ಯರುಗಳ ವಿವರ (ಸರ್ಕಾರದ ಆದೇಶ ಸಂಖ್ಯೆ: ಅಪಜೀ 33 ಇಎನ್‌ವಿ 2019, ಬೆಂಗಳೂರು ದಿನಾಂಕ 04/11/2020)** |
| 1 | ಡಾ.ಸಿ.ಜಿ.ಕುಶಾಲಪ್ಪ, ಡೀನ್ ಫಾರೆಸ್ಟರಿ, ಕಾಲೇಜ್ ಆಫ್ ಫಾರೆಸ್ಟರಿ, ಪೊನ್ನಂಪೇಟೆ, ಕೊಡಗು-571212 |
| 2 | ಡಾ. ಪ್ರಕಾಶ್ ಮೇಸ್ತ, ನಂ.369, ಏಸು ಬಂದರು, ಕೆಳಗಿನಪಾಳ್ಯ, ತ್ರಿಶೂಲ್ ಫ್ರೇಂಡ್ಸ್ ಹಿಂಭಾಗ, ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ-581334 |
| 3 | ಶ್ರೀ ಕೆ. ವೆಂಕಟೇಶ್, ಕೋ-ಆಡಿನೇಟರ್, ರೂರಲ್ ಕಮ್ಯುನಿಟಿ ಸೆಂಟರ್ ಪೋಸ್ಟ್, ವರದಮೂಲ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. |

ಮಂಡಳಿಯಲ್ಲಿ ಪದನಿಮಿತ್ತ ಹಾಗೂ ಅಧಿಕಾರೇತರ ಸದಸ್ಯರುಗಳು ಮುಂದುವರೆಯಲು ಸಾಧ್ಯವಿರುವುದಿಲ್ಲವೆಂದು ತಿಳಿಸಲಾದ ಮಾಹಿತಿ:

| | | |
|---|---|---|
| 1 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು (ಪದನಿಮಿತ್ತ ಸದಸ್ಯರು) | ಸರ್ಕಾರದ ಪತ್ರದಲ್ಲಿ ಪದನಿಮಿತ್ತ ಸದಸ್ಯರ ನೇಮಕಾತಿ ಕುರಿತು ಹೊರಡಿಸಿದ್ದ ಸರ್ಕಾರದ ಆದೇಶ ಸಂಖ್ಯೆ ಅಪಜೀ 203 ಇಎನ್‌ವಿ 2016 ದಿನಾಂಕ 12/02/2017ರ (ಆದೇಶದ ಪತ್ರ ಲಗತ್ತಿಸಲಾಗಿದೆ) ಆದೇಶ ಭಾಗದ ತ:ಖ್ತೆಯಲ್ಲಿನ ಕ್ರಮ ಸಂ 01ರಲ್ಲಿರುವ "ಸರ್ಕಾರದ ಅಪರ ಮುಖ್ಯ ಕಾರ್ಯದಶಿಗಳು, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ" ಎಂದಿರುವುದನ್ನು |

| | | |
|---|---|---|
| | | ಕೈಬಿಡಲಾಗಿದೆ ಎಂದು ತಿದ್ದುಪಡಿಯನ್ನು ಹೊರಡಿಸಿರುತ್ತಾರೆ. **(ಅನುಬಂಧ-3)(94-96)** |
| 2 | ಡಾ. ಹರಿಣಿ ನಾಗೇಂದ್ರ, ಪ್ರಾಧ್ಯಾಪಕರು, ಸುಸ್ಥಿರತೆ ಅಧ್ಯಯನ ಕೇಂದ್ರ ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾನಿಲಯ, ಪಿ.ಇ.ಎಸ್ ಕ್ಯಾಂಪಸ್, ಎಲೆಕ್ಟ್ರಾನಿಕ್ ಸಿಟಿ ಹೊಸೂರು ರಸ್ತೆ, ಬೆಂಗಳೂರು (ಅಧಿಕಾರೇತರ ಸದಸ್ಯರು) | ನವೆಂಬರ್ 6, 2020ರ ಪತ್ರದಲ್ಲಿ ಅನಾರೋಗ್ಯದ ನಿಮಿತ್ತ ಮಂಡಳಿಯಲ್ಲಿ ಅಧಿಕಾರೇತರ ಸದಸ್ಯರುಗಳಾಗಿ ಮುಂದು ವರೆಯಲು ಸಾಧ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ. **(ಅನುಬಂಧ-4)(97-100)** |

ಜೈವಿಕವೈವಿಧ್ಯ ಅಧಿನಿಯಮ 2002ರ ಪ್ರಕರಣ 22 (4)ರನ್ವಯ ಐವರು ಪದನಿಮಿತ್ತ ಸದಸ್ಯರುಗಳು ಹಾಗೂ ಐವರು ಅಧಿಕಾರೇತರ ಸದಸ್ಯರುಗಳನ್ನೊಳಗೊಂಡು ಒಟ್ಟು 10 ಸದಸ್ಯರಿರಬೇಕಾಗಿರುತ್ತದೆ.

ಮುಂದುವರೆದಂತೆ, ಸರ್ಕಾರದ ಆದೇಶ ಸಂಖ್ಯೆ: ಅಪಜೀ 33 ಇಎನ್‌ವಿ 2019, ಬೆಂಗಳೂರು ದಿನಾಂಕ 04/11/2020ರಲ್ಲಿ ನಾಲ್ಕು ಅಧಿಕಾರೇತರ ಸದಸ್ಯರುಗಳನ್ನು ಮಾತ್ರ ನಾಮನಿರ್ದೇಶನ ಮಾಡಿರುತ್ತಾರೆ.

ಈ ವಿಷಯದ ಕುರಿತು ಮಂಡಳಿಯಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆರವರ ಅಧ್ಯಕ್ಷತೆಯಲ್ಲಿ ದಿ: 28/09/2021ರಂದು ನಡೆದ ಸಭೆಯಲ್ಲಿ ಚರ್ಚಿಸಿ ನಿರ್ಣಯವನ್ನು ಕೈಗೊಳ್ಳಲಾಗಿರುತ್ತದೆ. **(ಅನುಬಂಧ-5) (101-102)**

ಅದರಂತೆ ಮಂಡಳಿಗೆ ಈ ಕೆಳಕಂಡ ಪದನಿಮಿತ್ತ ಹಾಗೂ ಅಧಿಕಾರೇತರ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಬೇಕಾಗಿರುತ್ತದೆ.

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು – (ಪದನಿಮಿತ್ತ)
2. ಜಿಲ್ಲಾ ಪಂಚಾಯಿತಿಯಿಂದ ಅಧ್ಯಕ್ಷರನ್ನು ಸರದಿಯ ಮೇಲೆ ನೇಮಕಾತಿ – ಅಧಿಕಾರೇತರ ಸದಸ್ಯರು.

ಈ ವಿಷಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**49/5 – ನಲ್ಲೂರು ಹುಣಸೆ ತೋಪು ಜೀವವೈವಿಧ್ಯ ಪಾರಂಪರಿಕ ತಾಣದ ನಿರ್ವಹಣೆ:**

ಹುಣಸೆ ತೋಪು ಪಾರಂಪರಿಕ ತಾಣದ ನಿರ್ವಹಣೆಯ ಸಲುವಾಗಿ ದಿನಾಂಕ 11.03.2020ರಂದು ಮಂಡಳಿಯ ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲಾಗಿದೆ. ಸಭೆಯಲ್ಲಿ ಮಂಡಳಿಯ ಸದಸ್ಯ ಕಾರ್ಯದರ್ಶಿಗಳು, ಸಹಾಯಕ ಆಯುಕ್ತರು, ಬೆಂಗಳೂರು ಗ್ರಾಮೀಣ ವಿಭಾಗ, ತಹಸೀಲ್ದಾರ್, ದೇವನಹಳ್ಳಿ ತಾಲ್ಲೂಕು ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ (ಪ್ರಾದೇಶಿಕ) ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ (ಸಾಮಾಜಿಕ ಅರಣ್ಯ ವಿಭಾಗ), ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರುಗಳ ಉಪಸ್ಥಿತಿಯಲ್ಲಿ ಚರ್ಚಿಸಿ, ತಾಣದಲ್ಲಿ ಈ ಕೆಳಕಂಡ ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುವುದು ಎಂದು ಸಭೆಯು ನಿರ್ಣಯವನ್ನು ತೆಗೆದುಕೊಂಡಿರುತ್ತದೆ.

1. ಹುಣಸೆ ತೋಪು ಪ್ರದೇಶದಲ್ಲಿ ಕಳೆ ತೆಗೆಯುವುದು ಹಾಗೂ ಶುಚಿಗೊಳಸುವುದು.
2. ರಕ್ಷಣೆಗೆ ಸರಪಳ-ಕೊಂಡಿ ಬೇಲಿ ಅಳವಡಿಸುವುದು.
3. ಸೂಕ್ತ ಸೂಚನಾ ಫಲಕಗಳನ್ನು ಹಾಕುವುದು.

ಈ ವಿಷಯವನ್ನು ದಿನಾಂಕ: 26/06/2020ರಂದು ನಡೆದ ಮಂಡಳಯ 44ನೇ ಸಭೆಯಲ್ಲಿ ಮಂಡಿಸಿ ಚರ್ಚಿಸಲಾಯಿತು. ಈ ನಿಟ್ಟಿನಲ್ಲಿ ನಲ್ಲೂರು ಗ್ರಾಮಪಂಚಾಯಿತಿ ಜೀವವೈವಿಧ್ಯ ನಿರ್ವಹಣಾ ಸಮಿತಿಗೆ ರೂ. 5.00 ಲಕ್ಷಗಳನ್ನು ಬಿಡುಗಡೆ ಮಾಡಿ, ಉಪ ಅರಣ್ಯ ಸಂರಕ್ಷಣಾಧಿಕಾರಿ (ಪ್ರಾದೇಶಿಕ) ಇವರ ಮೇಲ್ವಿಚಾರಣೆಯಲ್ಲಿ ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳಬಹುದು ಎಂದು ಸಭೆಯು ಸೂಚಿಸಿ ಅನುದಾನ ಬಿಡುಗಡೆಗೆ ಅನುಮೋದನೆ ನೀಡಿರುತ್ತದೆ.

ಅದರಂತೆ, ದಿನಾಂಕ 22/09/2020ರಂದು ಉಪ ಅರಣ್ಯ ಸಂರಕ್ಷಣಾಧಿಕಾರಿ (ಪ್ರಾದೇಶಿಕ ಅರಣ್ಯ), ಬೆಂಗಳೂರು ಗ್ರಾಮಂತರ ಇವರಿಗೆ ರೂ.5.00 ಲಕ್ಷಗಳ ಯೋಜನೆಯ ಅನುಷ್ಟಾನಕ್ಕೆ ವಾರ್ಷಿಕ ಕ್ರಿಯಾಯೋಜನೆಯನ್ನು ತಯಾರಿಸಿ ಸಲ್ಲಿಸಲು ತಿಳಸಲಾಗಿರುತ್ತದೆ. ಇದಕ್ಕೆ ಮುಂದುವರೆದಂತೆ, ಉಪ ಅರಣ್ಯ ಸಂರಕ್ಷಣಾಧಿಕಾರಿ (ಪ್ರಾದೇಶಿಕ ಅರಣ್ಯ) ಇವರು ದಿನಾಂಕ 18.01.2021ರ ಪತ್ರದ ಮೂಲಕ, ಸರಪಳ-ಕೊಂಡಿ ಬೇಲಿಯನ್ನು (Chainlink-mesh) ಅಳವಡಿಸಲು ಪ್ರತಿ ಕಿಲೋ ಮೀಟರ್‌ಗೆ ರೂ.33.67 ಲಕ್ಷಗಳ ಘಟಕದರವನ್ನು ನಿಗದಿಪಡಿಸಲಾಗಿರುತ್ತದೆ ಎಂದು ತಿಳಸುತ್ತ, ಮಂಡಳ ನೀಡಲಿರುವ ರೂ.5.00 ಲಕ್ಷಗಳಲ್ಲಿ ಹುಣಸೆ ತೋಪಿನಲ್ಲಿ ಕಳೆ ತೆಗೆಯುವುದು ಹಾಗೂ ಶುಚಿಗೊಳಸುವುದು ಮತ್ತು ಸೂಕ್ತ ಸೂಚನಾ ಫಲಕಗಳನ್ನು ಅಳವಡಿಸಲು ರೂ.2,52,380/- ಬಳಸಬಹುದಾಗಿರುತ್ತದೆ. ಮಿಕ್ಕ 2,47,620/- ರೂಗಳು ಕೇವಲ 74 ಮೀಟರ್‌ಗಳಷ್ಟು ಮಾತ್ರ ಸರಪಳಕೊಂಡಿ ಅಳವಡಿಸಬಹುದಾಗಿರುತ್ತದೆ. ಇದರಿಂದ ಕಾಮಗಾರಿ ಅಪೂರ್ಣವಾಗಿ ಉಳದಿರುತ್ತದೆ ಎಂದು ತಿಳಸಿರುತ್ತಾರೆ. ಆದರೆ 2,47,620/- ರೂಪಾಯಿಗಳನ್ನು ಬಳಸಿ ಮುಳ್ಳುತಂತಿ ಬೇಲಿ (Barbed wire fencing) ನಿರ್ಮಾಣ ಕೈಗೊಂಡಲ್ಲಿ ಸದರಿ ಪ್ರದೇಶದ ಸುತ್ತಲೂ ರಕ್ಷಣಾ ಬೇಲಿಯನ್ನು ನಿರ್ಮಾಣ ಮಾಡಬಹುದಾಗಿರುತ್ತದೆ, ಹಾಗಾಗಿ ಸರಪಳ ಬೇಲಿಯ ಬದಲಾಗಿ ಮುಳ್ಳುತಂತಿ ಬೇಲಿ ನಿರ್ಮಾಣ ಮಾಡಲು ಅವಕಾಶವನ್ನು ಕಲ್ಪಿಸಿಕೊಂಡು ರೂ.5.00 ಲಕ್ಷಗಳ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಿ ಮಂಡಳಯ ಅನುಮೋಧನೆಗೆ ಸಲ್ಲಿಸಿರುತ್ತಾರೆ. **(ಅನುಬಂಧ-6) (103-117)**

ಈ ಸಂಬಂಧ, ಮಂಡಳಯ 48ನೇ ಸಭೆಯಲ್ಲಿ ರೂ.15.00 ಲಕ್ಷಗಳನ್ನು ಮೀಸಲಿರಿಸಲಾಗಿದ್ದು, ಇದು ಇನ್ನು ಅನುಮೋದನೆಯಾಗಬೇಕಾಗಿರುತ್ತದೆ. ಮುಂದುವರೆದಂತೆ ಜೀವವೈವಿಧ್ಯ ಕಾಯ್ದೆ 2002ರ ಪರಿಚ್ಛೇದ 32ರಂತೆ ಈ ಮೊತ್ತವನ್ನು ಎ.ಬಿ.ಎಸ್ ನಿಧಿಯಿಂದಲೂ ಸಹ ಭರಿಸಬಹುದಾಗಿದೆ.

ಪಾರಂಪರಿಕ ತಾಣದ ನಿರ್ವಹಣೆಗೆ ಅನುಧಾನ ಹಂಚಿಕೆ ಹಾಗು ಬಿಡುಗಡೆ ಬಗ್ಗೆ ಸೂಕ್ತ ನಿರ್ದೇಶನಕ್ಕಾಗಿ ವಿಷಯವನ್ನು ಮಂಡಳ ಸಭೆಗೆ ಸಲ್ಲಿಸಿದೆ.

**49/6 – ಕರ್ನಾಟಕದ ಶೋಲಾ ಮಳೆಕಾಡು-ಹುಲ್ಲುಗಾವಲುಗಳ ಸಂಕೀರ್ಣ (Shola forest grassland complexes of Karnataka) ಸಂಶೋಧನಾ ಯೋಜನೆಯ ಅವಧಿ ವಿಸ್ತರಣೆ:**

ದಿನಾಂಕ 07/09/2019ರಂದು ನಡೆದ ಮಂಡಳಿಯ 42ನೇ ಸಭೆಯಲ್ಲಿ "ಕರ್ನಾಟಕದ ಶೋಲಾ ಮಳೆಕಾಡು-ಹುಲ್ಲುಗಾಲುಗಳ ಸಂಕೀರ್ಣ (Shola forest grassland complexes of Karnataka)" ಸಂಶೋಧನಾ ಯೋಜನೆಯನ್ನು ಡಾ॥ ಬಿ.ಸಿ ನಾಗರಾಜ, ಸಹ ಪ್ರಾಧ್ಯಾಪಕರು ಮತ್ತು ಪ್ರಧಾನ ಸಂಶೋಧಕರು, ಪರಿಸರ ವಿಜ್ಞಾನ ವಿಭಾಗ, ಬೆಂಗಳೂರು ವಿಶ್ವವಿಧ್ಯಾಲಯ ಇವರಿಗೆ ಮೂರು ವರ್ಷ ಅವಧಿಗೆ ಒಟ್ಟು ರೂ.21.53ಲಕ್ಷಗಳ ಅನುದಾನ ನೀಡಲು ಅನುಮೋದನೆ ನೀಡಲಾಗಿರುತ್ತದೆ.

ದಿನಾಂಕ:16/03/2020ರಂದು ನಡೆದ ಕರಾರು ಒಪ್ಪಂದದಂತೆ, ಮೂರು ವರ್ಷದ ಅವಧಿಗೆ ಮೊದಲನೆಯ ಕಂತು 50% ರಷ್ಟು ಅನುದಾನವನ್ನು ಪ್ರಾರಂಬಿಕ ಕಂತಾಗಿ ಬಿಡುಗಡೆ ಮಾಡಲಾಗಿದೆ. 18 ತಿಂಗಳ ನಂತರ ಬಳಿಕ ಪ್ರಮಾಣ ಪತ್ರದೊಂದಿಗೆ ಪ್ರಥಮ ಪ್ರಗತಿ ವರದಿಯನ್ನು ಮಂಡಳಿಗೆ ಸಲ್ಲಿಸಬೇಕಾಗಿರುತ್ತದೆ. ಮಂಡಳಿಯು ಪ್ರಗತಿ ಪರಿಶೀಲಿಸಿ ಅನುಮೋದನೆ ನೀಡಿದ ನಂತರ ಎರಡನೇಯ ಕಂತಾಗಿ 40% ಅನುದಾನ ಬಿಡುಗಡೆ ಮಾಡಬಹುದಾಗಿರುತ್ತದೆ.

ಈ ವಿಷಯವಾಗಿ ಯೋಜನೆಯ ಪ್ರಧಾನ ಸಂಶೋಧಕರು ದಿನಾಂಕ: 06.12.2021ರ ಪತ್ರದ ಮೂಲಕ, ಎರಡು ಬಾರಿ ಕೋವಿಡ್-19ರ ಲಾಕ್‌ಡೌನ್‌ನಿಂದಾಗಿ ಯೋಜನೆಯ ಸಕಲ ಸಿದ್ದತೆ ಮತ್ತು ಅನುಷ್ಠಾನದಲ್ಲಿ ವಿಳಂಬವಾಗಿರುತ್ತದೆ ಎಂದು ತಿಳಿಸುತ್ತಾ, ಯಾವುದೇ ಹೆಚ್ಚುವರಿ ಅನುದಾನದ ಅಗತ್ಯತೆ ಇಲ್ಲದೆ, ಪ್ರಗತಿ ವರದಿಯನ್ನು ಸಲ್ಲಿಸಲು ಎಂಟು ತಿಂಗಳ ಅಧಿಕ ಕಾಲಾವಕಾಶವನ್ನು ಕೋರಿರುತ್ತಾರೆ **(ಅನುಬಂಧ-7) (118)**

ಯೋಜನೆಯ ಸಂಪೂರ್ಣ ಅವಧಿಯು ದಿನಾಂಕ 16/03/2020 ರಿಂದ 16/03/2023ರ ವರೆಗೆ ಮೂರು ವರ್ಷಗಳಾಗಿರುವುದರಿಂದ, ವಿಷಯದ ಬಗ್ಗೆ ಚರ್ಚೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ಮಂಡಳಿಯ ಸಭೆಗೆ ಸಲ್ಲಿಸಲಾಗಿದೆ.

ಈ ವಿಷಯವನ್ನು ಮಂಡಳಿಯ ಮಾಹಿತಿಗಾಗಿ ಮಂಡಿಸಲಾಗಿದೆ.

**49/7 – ಪಾರಂಪರಿಕ ವೈದ್ಯರ ಸಮ್ಮೇಳನಕ್ಕೆ ಅನುದಾನ ಬಿಡುಗಡೆ.**

ಪಾರಂಪರಿಕ ವೈದ್ಯರ ಜ್ಞಾನವನ್ನು ದಾಖಲಿಸಲು, ಪಾರಂಪರಿಕ ಔಷಧಿ ಸಸ್ಯಗಳ ಮಾಹಿತಿ ಸಂರಕ್ಷಣೆಯನ್ನು ಮಾಡಲು ಕರ್ನಾಟಕ ಜೀವವೈವಿಧ್ಯ ಮಂಡಳಿ ಮತ್ತು ಕರ್ನಾಟಕ ರಾಜ್ಯ ಔಷಧಿ ಗಿಡಮೂಲಿಕಾ ಪ್ರಾಧಿಕಾರದವರ (ಕಂಪಾ) ಸಹಯೋಗದಲ್ಲಿ ಕರ್ನಾಟಕ ಮೂಲಿಕಾ ಉತ್ಸವ ಮತ್ತು ಪಾರಂಪರಿಕ ವೈದ್ಯರ ಸಮ್ಮೇಳನವನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಗಿರುತ್ತದೆ.

ಅದರಂತೆ, 2021-22ನೇ ಸಾಲಿನಲ್ಲಿ ರಾಜ್ಯದ ದಾವಣಗೆರೆ, ಗದಗ್, ವಿಜಯಪುರ, ಉಡುಪಿ, ಹಾಸನ ಮತ್ತು ಬೆಂಗಳೂರು ಸೇರಿ ಒಟ್ಟು ಆರು ವಿಭಾಗಗಳಲ್ಲಿ ನಡೆಸಲಾಗುವ ಪ್ರತಿ ಕಾರ್ಯಗಾರಕ್ಕೆ ರೂ 2.10 ಲಕ್ಷ ವೆಚ್ಚವಾಗುವ ಬಗ್ಗೆ ಅಂದಾಜನ್ನು ಕಂಪಾ ಸಲ್ಲಿಸಿದ್ದು ಇದರಲ್ಲಿ ಶೇ.50ರಷ್ಟನ್ನು ಕರ್ನಾಟಕ ರಾಜ್ಯ ಔಷಧಿ ಗಿಡಮೂಲಿಕಾ ಪ್ರಾಧಿಕಾರದವರು ಭರಿಸುತ್ತಿದ್ದು, ಇನ್ನುಳಿದ

ಶೇ.50ರಷ್ಟನ್ನು ಮಂಡಳಿಯು ಭರಿಸಬೇಕಾಗಿರುತ್ತದೆ. ಒಟ್ಟು 6 ಸಮ್ಮೇಳನಗಳನ್ನು ಆಯೋಜಿಸಲು ನಿರ್ಧರಿಸಲಾಗಿದ್ದು ಪ್ರತಿ ಸಮ್ಮೇಳನಕ್ಕೆ 1.10 ಲಕ್ಷದಂತೆ 6 ಸಮ್ಮೇಳನಕ್ಕೆ ರೂ 6.60 ಲಕ್ಷಗಳನ್ನು ಮಂಡಳಿಯಲ್ಲಿ ಕಾರ್ಯಗಾರಗಳಿಗೆ ಮೀಸಲಿಡಲಾದ ಅನುದಾನದಲ್ಲಿ **(ಅನುಬಂಧ-8) (119-142)** ಭರಿಸಬೇಕಾಗಿರುತ್ತದೆ.

ಈ ವಿಷಯವನ್ನು ಮಂಡಳಿಯ ಅನುಮೋದನೆಗಾಗಿ ಮಂಡಿಸಲಾಗಿದೆ.

**49/8 – ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಜೈವಿಕವೈವಿಧ್ಯ ಕಾಯ್ದೆ 2002ರ ಕುರಿತು ತರಬೇತಿ ಕಾರ್ಯಗಾರ.**

ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆಯನ್ನು ಈಗಾಗಲೇ ಪೂರ್ಣಗೊಳಿಸಲಾಗಿರುತ್ತದೆ. ಕಾರ್ಯಗಾರ ಮತ್ತು ಜಾಗೃತಿ ಕಾರ್ಯಕ್ರಮಗಳ ಆಯೋಜನಾ ಸಮಿತಿ ಸಭೆಯ ನಿರ್ಣಯದಂತೆ ಜೈವಿಕವೈವಿಧ್ಯ ಕಾಯ್ದೆ 2002ರ ಕುರಿತು ಜಾಗೃತಿ ಮೂಡಿಸಲು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಹಾಗೂ ಮುಂಚೂಣಿ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಗಾರವನ್ನು ಕರ್ನಾಟಕ ಜೀವವೈವಿಧ್ಯ ಮಂಡಳಿ ಮತ್ತು ಕರ್ನಾಟಕ ರಾಜ್ಯ ಔಷಧಿ ಗಿಡಮೂಲಿಕಾ ಪ್ರಾಧಿಕಾರದವರ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿರುತ್ತದೆ.

ಅದರಂತೆ, 2021-22ನೇ ಸಾಲಿನಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ 1) ಜೈವಿಕವೈವಿಧ್ಯ ಕಾಯ್ದೆ-2002 2) ಔಷಧಿ ಸಸ್ಯಗಳ ಪ್ರಾಮುಖ್ಯತೆ 3)ಪ್ರಮುಖ ಔಷಧಿ ಸಸ್ಯಗಳನ್ನು ಗುರುತಿಸುವಿಕೆ 4)ಆಯುರ್ವೇದದಲ್ಲಿ ಉಲ್ಲೇಖಿತವಾದ ಪ್ರಮುಖ ಔಷಧೀಯ ಸಸ್ಯಗಳು 5)ಕ್ಷೇತ್ರ ಭೇಟಿ ಮತ್ತು ಔಷಧಿ ಸಸ್ಯಗಳ ಪ್ರದರ್ಶನ ಸೇರಿ ಒಟ್ಟು 5 ಘೋಷ್ಠಿಗಳನ್ನು ಆಯೋಜಿಸಲು ನಿರ್ಧರಿಸಲಾಗಿದೆ. ಪ್ರತಿ ಘೋಷ್ಠಿಗೆ ರೂ 3.00 ಲಕ್ಷಗಳು ವೆಚ್ಚವಾಗುವ ನಿರೀಕ್ಷೆಯಿದ್ದು ಇದರಲ್ಲಿ ತಲಾ ಶೇ.50%ರಷ್ಟನ್ನು ಕಂಪಾ ಮತ್ತು ಮಂಡಳಿಯು ಭರಿಸಬೇಕಾಗಿರುತ್ತದೆ. ಹಾಗಾಗಿ, ಪ್ರತಿ ಘೋಷ್ಠಗೆ ರೂ 1.50 ಲಕ್ಷದಂತೆ 5 ಘೋಷ್ಠಿಗಳಿಗೆ ರೂ 7.50 ಲಕ್ಷಗಳನ್ನು ಮಂಡಳಿಯಲ್ಲಿ ಕಾರ್ಯಗಾರಗಳಿಗೆ ಮೀಸಲಿಡಲಾದ ಅನುದಾನದಲ್ಲಿ ಭರಿಸಬೇಕಾಗಿರುತ್ತದೆ. **(ಅನುಬಂಧ-9) (143-147)**

ಈ ವಿಷಯವನ್ನು ಮಂಡಳಿಯ ಮಾಹಿತಿಗಾಗಿ ಮಂಡಿಸಲಾಗಿದೆ.

**49/9 – ಎನ್.ಎಂ.ಪಿ.ಬಿ.ಯ ಪ್ರಾಧಿಕಾರಕ್ಕೆ ಹೊಸ ಪ್ರಸ್ತಾವನೆ "Creation of Online Database of Plant Resources of Karnataka Forest" ಸಲ್ಲಿಕೆ ಬಗ್ಗೆ.**

48/8 ರ ಕಾರ್ಯಸೂಚಿಯಲ್ಲಿ ಚರ್ಚಿಸಿ ನಿರ್ಣಯಿಸಿದಂತೆ ಎನ್ ಎಂ.ಪಿ. ಪಿ ಬಿ ಯೋಜನೆಯಡಿಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಷ್ಟ್ರೀಯ ಔಷಧೀಯ ಗಿಡಗಳ ಪ್ರಾಧಿಕಾರಕ್ಕೆ ಪತ್ರ ಸಂ: ಟಿಇಸಿ/ ಸಿ05/ಎನ್.ಎಂ.ಪಿ.ಬಿ/ ವ್ಯಾಲ್ಯೂಂ-6/353 ದಿನಾಂಕ 17/12/2021 ರಂದು 3 ವರ್ಷಗಳ ಅವಧಿಗೆ ಒಟ್ಟು ಅಂದಾಜು ವೆಚ್ಚ ರೂ 1,03,21,520/-ರ ಈ ಕೆಳಕಂಡ ಉದ್ದೇಶಗಳೊಂದಿಗೆ **"Creation of Online Database of Plant Resources of Karnataka Forest"** ಎಂಬ ವಿಷಯದ ಕುರಿತು ಪ್ರಸ್ತಾವನೆಯನ್ನು ತಯಾರಿಸಿ ಸಲ್ಲಿಸಲಾಗಿದೆ. **(ಅನುಬಂಧ-10) (148-158)**

- To develop an online database on medicinal plants by using the data documented during the project - **"Assessment of population Status and Removal of Bio-resources in Forests with special Emphasis on Medicinal Plants in Karnataka"**.
- A comprehensive database of status of plants present in Forest beat wise to division wise with scientific name, conservation status, geographical distribution, trade and medicinal uses.
- Develop and operationalize a search engine on medicinal plants for Information Retrieval and use by public in general.
- To enable a system for tracking information on utilization of Medicinal Plants by pharmaceutical companies/industries through data logs for a sustainable trade.
- Special focus on data logs with alerts pertaining to accessing information and usage of Threatened species of Karnataka.
- Bridging of KBBMPD with Access and Benefit Sharing (ABS) Online Application database for tracking the Medicinal Plants usage information submitted by companies through Form-1.

ಈ ವಿಷಯವನ್ನು ಮಂಡಳಿಯ ಅನುಮೋದನೆಗಾಗಿ ಮಂಡಿಸಲಾಗಿದೆ.

**49/10 – ಸಂಶೋಧನಾ ಯೋಜನೆಗಳ ಪ್ರಸ್ತಾವನೆಗಳ ಅನುಷ್ಠಾನ:**

ಪಶ್ಚಿಮ ಘಟ್ಟಗಳ ಅಳಿವಿನಂಚಿನಲ್ಲಿರುವ ಸಸ್ಯ ಪ್ರಬೇಧಗಳ ಸಂರಕ್ಷಣೆ ಹಾಗೂ ಜೀವವೈವಿಧ್ಯತೆಯ ಸಂರಕ್ಷಣೆ ಸಂಬಂಧಪಟ್ಟಂತೆ ಈ ಕೆಳಕಂಡ ಸಂಶೋಧನಾ ಯೋಜನೆಗಳನ್ನು ಮಂಡಳಿಯು ಅನುಷ್ಠಾನಗೊಳಿಸ ಬೇಕಾಗಿರುತ್ತದೆ. **(ಅನುಬಂಧ-11) (159-206)**

| Sl. No | Project Title | Submitted by |
|---|---|---|
| 1 | Collection, Evaluation and Conservation of Endangered and Threatened Garcinia Species of Western Ghats of India | Prof. Dr. V.Sivaram, Scientist & Principal Investigator, V.Sivaram Research Foundation, Vijayanagar, Bangalore. |
| 2 | Training, demonstration and popularization of nutritional gardening in the backyards of SC/ST women for food security, livelihood enhancement and environmental sustainability in Yelandur Taluk, Karnataka | Prof. Dr. V.Sivaram, Scientist & Principal Investigator, V.Sivaram Research Foundation, Vijayanagar, Bangalore. |
| 3 | Biodiversity Conservation with special reference to indigenous pollinators | Prof. Dr. V.Sivaram, Scientist & Principal Investigator, V.Sivaram Research Foundation, Vijayanagar, Bangalore. |
| 4 | Intigrated crop management practices for henancing productivity crops in different Agroclimatic Zones of Karnataka. | Smt. Padma<br>Founder Trustee Save Tiger First |

| | | |
|---|---|---|
| 5 | Climate Change related project proposal title: "Developing Strategic Management criteria for strengthening resilience of natural ecosystems and agriculture-fishery sectors in central western Ghats-west coast region, Karnataka State" | Dr. M.D.Subash chandran, Consulting Scientist, CES Field station of IISC-Kumta - 581343 |

ಈ ವಿಷಯವನ್ನು ಮಂಡಳಿಯ ಅನುಮೋದನೆಗಾಗಿ ಮಂಡಿಸಲಾಗಿದೆ.

**49/11 – ಮಂಡಳಿಯ ಅಂತರ್ಜಾಲತಾಣವನ್ನು (website) ನಿರ್ವಹಣೆ ಮಾಡಿದ ಬಾಬ್ತು ಮೂರು ತಿಂಗಳ ವೆಚ್ಚವನ್ನು ಭರಿಸುವ ಬಗ್ಗೆ:**

ಮಂಡಳಿಯ ಅಂತರ್ಜಾಲತಾಣವನ್ನು (website) ನಿರ್ವಹಣೆಯನ್ನು ಸಪ್ತಾ ಟೆಕ್ನಾಲಜಿಸ್‌ರವರ ಮೂಲಕ ನಿರ್ವಹಣೆ ಮಾಡಲಾಗುತ್ತಿದ್ದು ಈ ಬಗ್ಗೆ ದಿನಾಂಕ:31-05-2021ಕ್ಕೆ ಸದರಿಯವರ ಕಾರ್ಯಾವಧಿ ಮುಕ್ತಾಯವಾಗಿರುತ್ತದೆ. ಇವರ ಸೇವೆ ತೃಪ್ತಿಕರವಾಗಿದ್ದಲ್ಲಿ ಮುಂದಿನ ಒಂದು ವರ್ಷದ ಅವಧಿಗೆ ಮುಂದುವರೆಸುವ ಬಗ್ಗೆ ಕರಾರು ಒಪ್ಪಂದವನ್ನು ಮಾಡಿಕೊಳ್ಳಲಾಗಿದ್ದು ಅದರಂತೆ ಸದಸ್ಯ ಕಾರ್ಯದರ್ಶಿಗಳು ಕಡತದ ಟಿಪ್ಪಣಿ ಕಂಡಿಕೆ-31ರಲ್ಲಿ ದಿನಾಂಕ:01-06-2021 ರಿಂದ ಅನ್ವಯವಾಗುವಂತೆ ಒಂದು ವರ್ಷದ ಅವಧಿಗೆ ಸಪ್ತಾ ಟೆಕ್ನಾಲಜಿಸ್‌ರವರ ಸೇವೆಯನ್ನು ಮುಂದುವರೆಸುವ ಬಗ್ಗೆ ಅನುಮೋದನೆ ನೀಡಿರುತ್ತಾರೆ. ಆದರೆ ಈ ಬಗ್ಗೆ ಯಾವುದೇ ಕಾರ್ಯದೇಶವನ್ನು ನೀಡಿರುವುದಿಲ್ಲ.

ಮುಂದುವರೆದು, ಸಪ್ತಾ ಟೆಕ್ನಾಲಜಿಸ್‌ರವರೆ ಯಾವುದೇ ಕಾರ್ಯದೇಶವಿಲ್ಲದೆ ಜೂನ್-2021 ರಿಂದ ಆಗಸ್-2021ರವರೆಗಿನ ಮೂರು ತಿಂಗಳ ಅವಧಿಗೆ ಕಾರ್ಯದೇಶವಿಲ್ಲದೆ ಕಾರ್ಯನಿರ್ವಹಿಸಿದ ಬಾಬ್ತು ಹಳೆಯ ಕರಾರು ಒಪ್ಪಂದದಂತೆ ಮಾಡಬೇಕಾಗಿರುತ್ತದೆ. ಆದ್ದರಿಂದ ಮಾಸಿಕ ರೂ.7866/-ಗಳಂತೆ ಮೂರು ತಿಂಗಳಿಗೆ ಪಾವತಿ ಮಾಡಬೇಕಾದ ಮೊತ್ತ ರೂ.23,598/-ಗಳನ್ನು ಪಾವತಿ ಮಾಡಲು ಮಂಡಳಿ ಸಭೆಯ ಅನುಮೋದನೆ ಕೋರಿದೆ. **(ಅನುಬಂಧ-12) (207-210)**

**49/12 – ಮಂಡಳಿಗೆ ಅಗತ್ಯವಾದ ವಕೀಲರನ್ನು ಎಂಪ್ಯಾನಲ್ ಮಾಡಿಕೊಳ್ಳುವ ಬಗ್ಗೆ ಮತ್ತು ಈ ವೆಚ್ಚಗಳನ್ನು ಸರ್ಕಾರದ ನಿರ್ದೇಶನದಂತೆ ಪಾವತಿಸುವ ಬಗ್ಗೆ**

ಮಂಡಳಿಯ 48ನೇ ಸಭೆಯ ವಿಷಯ ಸಂಖ್ಯೆ:19ರ ಮೂಲಕ ಚರ್ಚಿಸಿ ತೀರ್ಮಾನಿಸಿದಂತೆ, ನ್ಯಾಯ ಸಮ್ಮತ ಲಾಭ ಹಂಚಿಕೆ ಶಾಖೆಗೆ ಸಂಬಂಧಿಸಿದಂತೆ ಈಗಿರುವ ವಕೀಲರ ತಂಡಕ್ಕೆ ಹೆಚ್ಚುವರಿಯಾಗಿ ಅಗತ್ಯ ವಕೀಲರನ್ನು ಎಂಪ್ಯಾನಲ್ಡ್ ಮಾಡಿಕೊಳ್ಳುವ ಬಗ್ಗೆ ಸದಸ್ಯ ಕಾರ್ಯದರ್ಶಿಗಳಿಗೆ ಮಂಡಳಿಯ 48ನೇ ಸಭೆಯು ನೀಡಿದ ನಿರ್ದೇಶನದಂತೆ, ಮಂಡಳಿಯ ಕಾಯ್ದೆ-ಕಾನೂನುಗಳ ಅರಿವುಳ್ಳ, ಸಮರ್ಥವಾಗಿ ಮಂಡಳಿಯನ್ನು ಪ್ರತಿನಿಧಿಸಬಲ್ಲ ಮೂವರು ವಕೀಲರನ್ನು ಗುರುತಿಸಲಾಗಿರುತ್ತದೆ. **(ಅನುಬಂಧ-13) (211-216)** ಅವರುಗಳ ವಿವರ ಕೆಳಗಿನಂತಿದೆ:

1. ಶ್ರೀಮತಿ ರೂಪ ಬಿ.ಪಿ.ವಕೀಲರು, ಮಲ್ಲೇಶ್ವರಂ, ಬೆಂಗಳೂರು.
2. ಶ್ರೀ ಸಮರ್ಥ ಪ್ರಕಾಶ್,ವಕೀಲರು, ಮೆ. ಆರ್ಯನ್ ಲಾ, ತಿಪ್ಪಸಂದ್ರ ಮುಖ್ಯ ರಸ್ತೆ, ಬೆಂಗಳೂರು
3. ಶ್ರೀ ಬಿ.ಎ. ಬೆಳ್ಳಿಯಪ್ಪ, ವಕೀಲರು, ಬೆಂಗಳೂರು.

ಈ ಮೂವರು ವಕೀಲರನ್ನು ಪ್ರಸ್ತುತ ಇರುವ ವಕೀಲರ ತಂಡಕ್ಕೆ ಎಂಪ್ಯಾನಲ್ಡ್ ಮಾಡಿಕೊಳ್ಳಲು ಹಾಗೂ ಮಂಡಳಿಯು ಘನ ನ್ಯಾಯಲಯಗಳಲ್ಲಿ ಹೂಡಬಹುದಾದ ಮೊಕದ್ದೊಮ್ಮೆಗಳನ್ನು ಹಂಚುವ ಬಗ್ಗೆ ಮಂಡಳಿಯ ಸಭೆಯ ಅನುಮೋದನೆ ಕೋರಿದೆ.

**49/13 – ನ್ಯಾಯಸಮ್ಮತ ಲಾಭ ಹಂಚಿಕೆಗೆ ಸಂಬಂಧಿಸಿದಂತೆ ಇರುವ ಮೊಕದ್ದೊಮ್ಮೆಗಳ ಸ್ಥಿತಿಗತಿಗಳ ವಿವರ**

ನ್ಯಾಯಸಮ್ಮತ ಲಾಭ ಹಂಚಿಕೆಗೆ ಸಂಬಂಧಿಸಿದಂತೆ ಸುಮಾರು ೩೦ ಮೊಕದ್ದೊಮ್ಮೆಗಳನ್ನು ವಿವಿಧ ನ್ಯಾಯಲಯಗಳಲ್ಲಿ ಹೂಡಲಾಗಿದ್ದು ಪ್ರತಿ ಮೊಕದ್ದಮ್ಮೆಯ ಪೂರ್ಣವಿವರವನ್ನು **(ಅನುಬಂಧ-14) (217-221) ರಲ್ಲಿ** ನೀಡಲಾಗಿರುತ್ತದೆ.

ಈ ಬಗ್ಗೆ ವಿಸೃತ ಚರ್ಚೆ ನಡೆಸಿ ಕೈಗೊಳ್ಳಬೇಕಾದ ಮುಂದಿನ ಕ್ರಮಗಳ ಬಗ್ಗೆ ಸೂಕ್ತ ನಿರ್ದೇಶನ ಕೋರಿದೆ.

**49/14 – ಮಂಡಳಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರಿಗೆ ನೀಡಲಾಗುತ್ತಿರುವ ದೂರವಾಣಿ ಭತ್ಯೆಯ ಬಗ್ಗೆ.**

ಮಂಡಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರಿಗೆ ರೂ.೩೦೦/-ಗಳನ್ನು ದೂರವಾಣಿ ವೆಚ್ಚವನ್ನಾಗಿ ಪಾವತಿ ಮಾಡಲಾಗುತ್ತಿರುತ್ತದೆ. ಮಂಡಳಿಯ ಸಭೆಯ ತೀರ್ಮಾನದಂತೆ ಮೊದಲು ಪಾವತಿ ಮಾಡಿ ನಂತರ ವೆಚ್ಚದ ವೋಚರ್‍ನ್ನು ಮಂಡಳಿಗೆ ಸಲ್ಲಿಸಿದಲ್ಲಿ ಮರುಪಾವತಿ ಮಾಡಬಹುದಾಗಿರುತ್ತದೆ. ಆದರೆ ಈ ಕ್ರಮವನ್ನು ಕೈಗೊಳ್ಳದೆ ಹೊರಗುತ್ತಿಗೆ ಸೇವೆಯನ್ನು ಒದಗಿಸುತ್ತಿರುವ ಶ್ರೀ ಉದ್ಯೋಗ್ ಎಂಟರ್‍ಪ್ರೈಸೆಸ್ ಸಂಸ್ಥೆಗೆ ಎಲ್ಲಾ ಸಿಬ್ಬಂದಿಗಳ ಬಾಬ್ತು ತಲಾ ರೂ.೩೦೦/-ಗಳನ್ನು ದೂರವಾಣಿ ವೆಚ್ಚವನ್ನಾಗಿ ಪಾವತಿಸಲಾಗುತ್ತಿದೆ. ಈ ಬಗ್ಗೆ ಕರಾರು ಒಪ್ಪಂದದಲ್ಲಿ ಯಾವುದೇ ಕಂಡಿಕೆಗಳಲ್ಲಿ ಇದನ್ನು ಪ್ರಸ್ತಾಪಿಸದೆ ಅಥವಾ ಮಂಡಳಿಯಿಂದ ಯಾವುದೇ ಪತ್ರ ವ್ಯವಹಾರ ನಡೆಸದೆ, ಕಾರ್ಯದೇಶ ನೀಡದೆ ಪ್ರತಿ ಮಾಹೆಯು ಪಾವತಿ ಮಾಡಲಾಗುತ್ತಿದೆ.

ಮಂಡಳಿಯಲ್ಲಿನ ಅಧಿಕಾರಿ ವರ್ಗದವರು ಮತ್ತು ರಾಜ್ಯವ್ಯಾಪಿ ತರಬೇತಿ ಅಥವಾ ಕಛೇರಿ ಕೆಲಸ ನಿಮಿತ್ತ ಇತರೆ ಸ್ಥಳಗಳಿಗೆ ತೆರಳಿದ್ದಲ್ಲಿ ಸಂಹವನ ಹಾಗೂ ಸಂಪರ್ಕಕ್ಕಾಗಿ ಮೊಬೈಲ್ ದೂರವಾಣಿಗಳು ಅನಿವಾರ್ಯವಾಗಿರುವ ಹಿನ್ನಲೆಯಲ್ಲಿ ಮೇಲೆ ವಿವರಸಿಲಾದಂತೆ ರೂ ೩೦೦/-ರೂಗಳನ್ನು ಎಲ್ಲಾ ಸಿಬ್ಬಂದಿಗೆ ನವೆಂಬರ್ 2021 ಮಾಹೆಯವರೆಗೆ ಶ್ರೀ ಉದ್ಯೋಗ್ ಎಂಟರ್‍ಪ್ರೈಸೆಸ್ ಸಂಸ್ಥೆಗೆ ಪಾವತಿ ಮಾಡಿರುವುದನ್ನು ಮತ್ತು ಈ ಆರ್ಥಿಕ ವರ್ಷದಲ್ಲಿ ಪಾವತಿ ಮಾಡಬೇಕಾದ ಮೊತ್ತವನ್ನು ಹಾಗೂ ಭವಿಷ್ಯದಲ್ಲಿ ಹೊರಗುತ್ತಿಗೆ ನೀಡುವ ಸಂಸ್ಥೆಗೆ ಮೊಬೈಲ್ ಭತ್ಯೆಯನ್ನು ಪಾವತಿಸುವುದು ಅಗತ್ಯವಾಗಿರುತ್ತದೆ. ಈ ಹಿನ್ನಲೆಯಲ್ಲಿ ಮಂಡಳಿಯ ಸಭೆಯ ಸೂಕ್ತ ನಿರ್ದೇಶನ ಕೋರಿದೆ.

## 49/15 – ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಿದ್ಧಪಡಿಸುವ ಬಗ್ಗೆ

ಮಂಡಳಿಯ ಸಭೆಯಲ್ಲಿ ನೀಡಲಾದ ನಿರ್ದೇಶನದಂತೆ ಮಂಡಳಿಗೆ ಈಗಾಗಲೇ ಮಂಜೂರಾದ ಹುದ್ದೆಗಳನ್ನು ಪರಿಗಣಿಸಿ, ಮಂಡಳಿಯ ಪ್ರಸ್ತುತ ಸ್ಥಿತಿಗಳಿಗೆ ಹಾಗೂ ಭವಿಷ್ಯದಲ್ಲಿ ಜೀವವೈವಿಧ್ಯ ಸಂರಕ್ಷಣೆಯ ಕಾರ್ಯವ್ಯಾಪ್ತಿಯನ್ನು ಪರಿಗಣಿಸಿ ಅಗತ್ಯ ಹುದ್ದೆಗಳ ಮಂಜೂರು ಮಾಡುವುದು ಅಗತ್ಯವಾಗಿರುತ್ತದೆ. ಸರ್ಕಾರದ ವಿವಿಧ ಆದೇಶಗಳಲ್ಲಿ ಮಂಡಳಿಗೆ ಇದುವರೆವಿಗೂ ಮಂಜೂರು ಮಾಡಲಾದ ಒಟ್ಟು ಹುದ್ದೆಗಳ ವಿವರ ಕೆಳಗಿನಂತಿರುತ್ತವೆ.

| ಕ್ರ.ಸಂ. | ವೃಂದ | ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ | ಸರ್ಕಾರದ ಆದೇಶ ಸಂಖ್ಯೆ | ಷರಾ |
|---|---|---|---|---|---|
| 1 | ಎ-ವೃಂದ | ಭಾರತೀಯ ಅರಣ್ಯ ಸೇವೆಯ ಸೇವಾ ವೇತನ | 1 | ಅಪಜೀ 125 ಇಎನ್ವಿ 2003 ದಿನಾಂಕ 19/06/2003 | ಭಾರತೀಯ ಅರಣ್ಯ ಸೇವೆಯಿಂದ ನಿಯೋಜನೆ |
| 2 | ಎ-ವೃಂದ | 67550-104600 | 3 | | ಉಪ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಇಲಾಖೆ)-1<br>ಉಪ ನಿರ್ದೇಶಕರು (ತೋಟಗಾರಿಕೆ)-1<br>ಕಾರ್ಯನಿರ್ವಾಹಕ ಅಧಿಕಾರಿ (ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ)-1<br>ಪ್ರೊಫೆಸರ್/ರೀಡರ್(ಸಸ್ಯಶಾಸ್ತ್ರ)-1<br>ಪ್ರೊಫೆಸರ್/ರೀಡರ್(ಪ್ರಾಣಿ ಶಾಸ್ತ್ರ)-1<br>ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಇಲಾಖೆ)-1<br>ಮೇಲಿನ ಎಲ್ಲಾ ಹುದ್ದೆಗಳು ಆಯಾಯ ಇಲಾಖೆಯಿಂದ ನಿಯೋಜನೆ |
| 3 | ಬಿ ವೃಂದ | 40900-78200 | 1 | ಅಪಜೀ 243 ಇಎನ್ವಿ 2016 ದಿನಾಂಕ 31/08/2019 | ಲೆಕ್ಕ ಅಧೀಕ್ಷಕರು-1 ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆಯಿಂದ ನಿಯೋಜನೆ |
| 4 | ಎಕ್ಸಿಕ್ಯೂಟೀವ್ ಅಸಿಸ್ಟೆಂಟ್ | - | 4 | | ಹೊರಗುತ್ತಿಗೆ ಮೂಲಕ ಭರ್ತಿ ಮಾಡುವುದು |
| 5 | ಲೆಕ್ಕ ಮೇಲ್ವಿಚಾರಕರು | - | 1 | | |
| 6 | ಡಾಟಾ ಎಂಟ್ರಿ ಆಪರೇಟರ್ | - | 2 | | |
| 7 | ದಲಾಯತ್ | - | 3 | | |
| 8 | ಆಫೀಸ್ ಅಸಿಸ್ಟೆಂಟ್ (ಆಡಳಿತ) | - | 1 | ಅಪಜೀ 244 ಇಎನ್ವಿ 2016 ದಿನಾಂಕ 30/08/2019 | |
| 9 | ಆಫೀಸ್ ಅಸಿಸ್ಟೆಂಟ್ (ಲೆಕ್ಕ ಪತ್ರ) | - | 1 | | |
| 10 | ಆಫೀಸ್ ಅಸಿಸ್ಟೆಂಟ್ (ಪಿ.ಬಿ.ಆರ್.) | - | 1 | | |
| 11 | ಆಫೀಸ್ ಅಸಿಸ್ಟೆಂಟ್ (ಬಿ.ಎಂ.ಸಿ) | - | 1 | | |
| 12 | ಆಫೀಸ್ ಅಸಿಸ್ಟೆಂಟ್ (ಲೀಗಲ್) | - | 1 | | |
| 13 | ಆಫೀಸ್ ಅಸಿಸ್ಟೆಂಟ್ (ಐ.ಟಿ.ತಾಂತ್ರಿಕ ಪರಿಣಿತರು) | - | 1 | | |
| | | ಒಟ್ಟು | 24 | | |

ಭವಿಷ್ಯದಲ್ಲಿ ಮಂಡಳಿಯು ತನ್ನ ಕಾರ್ಯವ್ಯಾಪ್ತಿಯನ್ನು ಇನ್ನೂ ಹೆಚ್ಚಿಸಬೇಕಾಗಿರುವುದರಿಂದ, ಬಿ.ಎಂ.ಸಿ.ಗಳ ಬಲವರ್ಧನೆ, ನಿರಂತರ ತರಬೇತಿ, ಇನ್ನು ಹೆಚ್ಚಿನ ಜಾಗೃತಿಯನ್ನು ಮೂಡಿಸುವ ಮೂಲಕ ಹೆಚ್ಚಿನ ಜನ ಸಾಮಾನ್ಯರನ್ನು ತಲುಪುವ ಹಿನ್ನೆಲೆಯಲ್ಲಿ ಮೇಲಿನ ಹುದ್ದೆಗಳನ್ನು ಕೆಲವನ್ನು ಹಾಗೆಯೇ ಉಳಿಸಿಕೊಂಡು, ಕೆಲವು ಹುದ್ದೆಗಳನ್ನು ಮಾರ್ಪಾಡು ಮಾಡುವ ಮೂಲಕ ಮತ್ತು ಹೊಸ ಹುದ್ದೆಗಳನ್ನು ಸೃಜಿಸಬೇಕಾದ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ಪ್ರಸ್ತಾಪಿಸಿದೆ.

| ಕ್ರ.ಸಂ. | ವೃಂದ | ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ | ಷರಾ |
|---|---|---|---|---|
| 1 | ಎ-ವೃಂದ | 182200-224100 | 1 | ಭಾರತೀಯ ಅರಣ್ಯ ಸೇವೆಯಿಂದ ನಿಯೋಜನೆ |
| 2 | ಎ-ವೃಂದ | 67550-104600 | 3 | ಉಪ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಇಲಾಖೆ) / ಆಡಳಿತಾಧಿಕಾರಿ-1<br>ಕಾರ್ಯನಿರ್ವಾಹಕ ಅಧಿಕಾರಿ (ತೋಟಗಾರಿಕೆ)-1<br>ಕಾರ್ಯನಿರ್ವಾಹಕ ಅಧಿಕಾರಿ ( ಆಯುಶ್)-1<br><br>ಮೇಲಿನ ಎಲ್ಲಾ ಹುದ್ದೆಗಳು ಆಯಾಯ ಇಲಾಖೆಯಿಂದ ನಿಯೋಜನೆ |
| 3 | ಎ-ವೃಂದ | 52650-97100 | 7 | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಇಲಾಖೆ)-1<br>ಸಹ ನಿರ್ದೇಶಕ (ಸಸ್ಯಶಾಸ್ತ್ರ)-1<br>ಸಹ ನಿರ್ದೇಶಕ (ಪ್ರಾಣಿಶಾಸ್ತ್ರ)-1<br>ಸಹ ನಿರ್ದೇಶಕ (ಪರಿಸರ ವಿಜ್ಞಾನ)-1<br>ಸಹ ನಿರ್ದೇಶಕ(ಕೃಷಿ)-1<br>ಸಹ ನಿರ್ದೇಶಕ(ತೋಟಗಾರಿಕೆ)-1<br>ಸಹ ನಿರ್ದೇಶಕ(ಕಾನೂನು)-1<br><br>**ನಿಯೋಜನೆ/ಹೊರಗುತ್ತಿಗೆ ಮೂಲಕ ಭರ್ತಿ ಮಾಡಿಕೊಳ್ಳುವುದು** |
| 4 | ಬಿ ವೃಂದ | 40900-78200 | 2 | ಲೆಕ್ಕ ಅಧೀಕ್ಷಕರು-1 ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆಯಿಂದ ನಿಯೋಜನೆ<br>ಕಂಪ್ಯೂಟರ್/ವೆಬ್ ಪರಿಣಿತರು)-1 **ಹೊರಗುತ್ತಿಗೆ ಮೂಲಕ ಭರ್ತಿ ಮಾಡುವುದು** |
| 5 | ಸಿ-ವೃಂದ | 27650-52650 | 9 | ಆಪ್ತ ಸಹಾಯಕರು-2<br>ಎಕ್ಸಿಕ್ಯೂಟೀವ್ ಅಸಿಸ್ಟೆಂಟ್-6<br>ಲೆಕ್ಕ ಸಹಾಯಕರು-1<br><br>**ಹೊರಗುತ್ತಿಗೆ ಮೂಲಕ ಭರ್ತಿ ಮಾಡುವುದು** |
| 6 | ಸಿ-ವೃಂದ | 21400-42000 | 3 | ಕಛೇರಿ ಸಹಾಯಕರು/ಡಾಟಾ ಎಂಟ್ರಿ ಆಪರೇಟರ್-3<br><br>**ಹೊರಗುತ್ತಿಗೆ ಮೂಲಕ ಭರ್ತಿ ಮಾಡುವುದು** |
| 7 | ಡಿ-ವೃಂದ | 17000-28950 | 8 | ದಲಾಯತ್-3 |

| | | | | |
|---|---|---|---|---|
| | | | | ವಾಹನ ಚಾಲಕರು-4<br>ನಾಲ್ಕನೇ ದರ್ಜೆ ಸಹಾಯಕರು-1<br><br>**ಹೊರಗುತ್ತಿಗೆ ಮೂಲಕ ಭರ್ತಿ ಮಾಡುವುದು** |
| | | **ಒಟ್ಟು** | **33** | |

ಮೇಲಿನ ಹುದ್ದೆಗಳನ್ನು ಕರ್ನಾಟಕ ಜೀವ ವೈವಿಧ್ಯ ಮಂಡಳಿಗೆ ಮಂಜೂರು ಮಾಡುವಂತೆ ಕೋರಿ ಸರ್ಕಾರಕ್ಕೆ ವಿವರವಾದ ವರದಿಯನ್ನು ಸಲ್ಲಿಸಿ ಸರ್ಕಾರದ ಅನುಮೋದನೆ ಪಡೆಯಬೇಕಾಗಿರುತ್ತದೆ. ಸರ್ಕಾರದ ಅನುಮೋದನೆಯ ನಂತರ ಮಂಜೂರಾದ ಹುದ್ದೆಗಳನ್ನು ಪರಿಗಣಿಸಿ ನಂತರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಿದ್ಧಪಡಿಸಬೇಕಾಗಿರುತ್ತದೆ. **(ಅನುಬಂಧ-15) (222-227)**

ಈ ಹಿನ್ನೆಲೆಯಲ್ಲಿ ಪರಿಷ್ಕೃತ ಹುದ್ದೆಗಳ ಮಂಜೂರಾತಿ ಬಗ್ಗೆ ಸರ್ಕಾರದ ಅನುಮೋದನೆ ಪಡೆಯಲು ಮಂಡಳಿಯ ಸಭೆಯ ಅನುಮೋದನೆ ಕೋರಿದೆ.

**49/16 – ಮಂಡಳಿಯ ಹೊರಗುತ್ತಿಗೆ ನೌಕರರಿಗೆ ಪ್ರವಾಸ ಸಂದರ್ಭದಲ್ಲಿ ದಿನ ಭತ್ಯೆ ಮತ್ತು ಪ್ರವಾಸ ಭತ್ಯೆಯನ್ನು ಪಾವತಿಸುವ ಬಗ್ಗೆ**

ಕರ್ನಾಟಕ ಜೀವವೈವಿಧ್ಯ ಮಂಡಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಮಾಲೋಚಕರು, ತಾಂತ್ರಿಕ ಕಾರ್ಯ ನಿರ್ವಾಹಕರು, ಸಹಾಯಕ ಕಾರ್ಯ ನಿರ್ವಾಹಕರು, ಚಾಲಕರು/ದಲಾಯತ್‌ಗಳು ಮಂಡಳಿಯ ಕೆಲಸ ಕಾರ್ಯಗಳ ನಿಮಿತ್ತ ಅಥವಾ ತರಬೇತಿ ನಿಮಿತ್ತ ಅಥವಾ ಅಧಿಕೃತ ಪ್ರವಾಸ ನಿಮಿತ್ತ ತೆರಳಿದ ಸಂದರ್ಭದಲ್ಲಿ ಪ್ರವಾಸ ಭತ್ಯೆಯನ್ನು ನೀಡಲಾಗುತ್ತಿರುತ್ತದೆ. ಈ ದರವು ಹಾಗೂ ದರ್ಜೆಯು ಕಡಿಮೆ ಇರುವುದಾಗಿ ಕಂಡುಬಂದಿದ್ದು ಇದನ್ನು ಹೆಚ್ಚಿಸಬೇಕೆಂದು ಹೊರಗುತ್ತಿಗೆ ನೌಕರರು ಕೋರಿದ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಎಸ್‌ಆರ್‌ಎ 2019, ಬೆಂಗಳೂರು ದಿನಾಂಕ:11-01-2019ರಲ್ಲಿ ವಿವರಿಸಲಾದಂತೆ ಈ ಕೆಳಗಿನ ಹುದ್ದೆಗಳಿಗೆ ಪ್ರವಾಸ ಭತ್ಯೆ ಮತ್ತು ದಿನಭತ್ಯೆಯನ್ನು ಮಂಜೂರು ಮಾಡುವಂತೆ ಮಂಡಳಿಯ ಸಭೆಯ ಅನುಮೋದನೆ ಕೋರಿದೆ. **(ಅನುಬಂಧ-16) (228-245)**

| ಕ್ರ.ಸಂ. | ಹುದ್ದೆ | ವರ್ಗ | ಷರಾ |
|---|---|---|---|
| 1 | ಸಮಾಲೋಚಕರು<br>ತಾಂತ್ರಿಕ ಕಾರ್ಯ ನಿರ್ವಾಹಕರು<br>ಸಹಾಯಕ ಕಾರ್ಯ ನಿರ್ವಾಹಕರು | II | ಗ್ರೂಪ್-ಬಿ ವೃಂದದ ಅಧಿಕಾರಿ ವರ್ಗಕ್ಕೆ ಅನ್ವಯವಾಗುವ ದಿನಭತ್ಯೆ ಮತ್ತು ಪ್ರವಾಸ ಭತ್ಯೆ ಪಡೆಯಲು ಅರ್ಹರಿರುತ್ತಾರೆ |
| 2 | ಚಾಲಕರು/ದಲಾಯತ್‌ಗಳು | IV | ಗ್ರೂಪ್-ಡಿ ವೃಂದದ ಅಧಿಕಾರಿ ವರ್ಗಕ್ಕೆ ಅನ್ವಯವಾಗುವ ದಿನಭತ್ಯೆ ಮತ್ತು ಪ್ರವಾಸ ಭತ್ಯೆ ಪಡೆಯಲು ಅರ್ಹರಿರುತ್ತಾರೆ |

**49/17 – ಆದಾಯ ತೆರಿಗೆ ಇಲಾಖೆಗೆ ಪಾವತಿಸಬೇಕಾದ ದಂಡ ಬಡ್ಡಿ ಮತ್ತು ಇತರೆ ಶುಲ್ಕಗಳನ್ನು ಪಾವತಿ ಮಾಡುವ ಬಗ್ಗೆ**

ಮಂಡಳಿಯು 2008-09 ರಿಂದ 2020-21ನೇ ಸಾಲಿನವರೆಗೆ ಆದಾಯ ತೆರಿಗೆ ಇಲಾಖೆಗೆ ಪಾವತಿಸಬೇಕಾದ ಬಾಕಿ ದಂಡ, ಬಡ್ಡಿ ಮತ್ತು ಇತರೆ ಶುಲ್ಕಗಳಿಗೆ ಸಂಬಂಧಿಸಿದ ಮೊತ್ತ

ರೂ.3,38,580.24ಗಳನ್ನು ಪಾವತಿಸುವ ಬಗ್ಗೆ ಮಂಡಳಿಯ 48ನೇ ಸಭೆಯ ವಿಷಯ ಸಂಖ್ಯೆ:7ರಲ್ಲಿ ಅನುಮೋದನೆ ಕೋರಲಾಗಿತ್ತು. ಆದರೆ ಮಂಡಳಿಯು ಈ ಬಗ್ಗೆ ತೆರಿಗೆ ಸಲಹೆಗಾರರ/ಲೆಕ್ಕ ಪರಿಶೋಧಕರ ಸೇವೆಯನ್ನು ಪಡೆದುಕೊಂಡು ವಿವರಗಳನ್ನು ಮುಂದಿನ ಮಂಡಳಿ ಸಭೆಗೆ ಒದಗಿಸುವಂತೆ ಸದಸ್ಯ ಕಾರ್ಯದರ್ಶಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿತ್ತು. ಅದರಂತೆ ತೆರಿಗೆ ಸಲಹೆಗಾರರಾದ ಶ್ರೀ ಸುದರ್ಶನ್ & ಕೋ., ರವರು ಈ ಬಗ್ಗೆ ವರದಿ ನೀಡಿದ್ದು ವರದಿಯ ಸಾರಾಂಶ ಈ ಕೆಳಗಿನಂತಿರುತ್ತದೆ. ಪೂರ್ಣ ವರದಿ **(ಅನುಬಂಧ-17) (246-247)** ಅಡಕವಿರಿಸಿದೆ.

ತೆರಿಗೆ ಸಲಹೆಗಾರರ ವರದಿಯಂತೆ

1. Out of 95 Quarters 65 Quarterly ETDS correction in concern Financial year Quarters to be done corrections.
2. Out of 95 Quarters 12 Quarters - Appeals to be filed to the TDS Department to get the waive off for ₹.1,11,410/- (presently TDS department trying to implement the automatic waive off without appeals)
3. **Compulsory payment demand :**
   a. **Interest on Late Filing of ₹.25,294/-**
   b. **Interest on Late Filing Fees of ₹.1,337/-**
   c. **Late Filing Fees of ₹.77,010/- after 01-06-2015**
   d. **After making above payments additional interest will raise that also to be payable, now it is not possible to calculate exact additional interest TDS TRACES department will send notice for additional interest.**
4. Short Deduction: if PAN is valid but deducted less amount then it is payable along with the interest.
5. To do above Corrections of 65 Quarters :- Professional Fees per Quarter is ₹.500/-
6. To file 12 Quarter Appeals : Department fees is ₹.1000/- per Quarter paid through the online challan, Professional Fees for appeal filing fees is ₹.1000/- per quarter. If it is to be solved immediately we will take necessary action as soon as possible although TDS Department will clear all this late filing fees before 01-06-2015 issue without filing the appeals in TRACES, But it will take some time.

ಮೇಲಿನ ಅಂಶಗಳನ್ನು ಮಂಡಳಿಯ ಸಭೆಗೆ ಸಲ್ಲಿಸುತ್ತಾ, ಮುಂದಿನ ನಿರ್ದೇಶನಕ್ಕೆ ಕೋರಿದೆ.

**49/18 – ಹೊರಗುತ್ತಿಗೆ ಸಿಬ್ಬಂದಿಗಳ ಹೊಸ ಟೆಂಡರ್‌ನ್ನು ಅಹ್ವಾನಿಸುವ ಬಗ್ಗೆ,**

ಮಂಡಳಿಗೆ ಅಗತ್ಯವಿರುವ ಸಿಬ್ಬಂದಿಗಳನ್ನು ಶ್ರೀ ಉದ್ಯೋಗ್ ಎಂಟರ್ ಪ್ರೈಸೆಸ್‌ನಿಂದ ಹೊರಗುತ್ತಿಗೆ ಮೂಲಕ ಪಡೆಯಲಾಗಿರುತ್ತದೆ. ಸದರಿಯವರ ಟೆಂಡರ್ ಅವಧಿಯು ದಿ:31-03-2022ಕ್ಕೆ ಮುಕ್ತಾಯವಾಗುತ್ತದೆ. ಮಂಡಳಿಯ ದೈನಂದಿನ ಕಾರ್ಯಗಳು ಸುಗಮವಾಗಿ ಮತ್ತು ನಿರಂತರವಾಗಿ ನಡೆಯಬೇಕಾದ ಹಿನ್ನೆಲೆಯಲ್ಲಿ ಹಾಗೂ ಟೆಂಡರ್ ಪ್ರಕ್ರಿಯೆಲ್ಲಿ ಆಗುವ ವಿಳಂಬವನ್ನು ಪರಿಗಣಿಸಿ ಹೊಸ ಟೆಂಡರ್ ತುರ್ತಾಗಿ ಕರೆದು ಮಾರ್ಚ-31ರ ಒಳಗೆ ಕಾರ್ಯದೇಶ ನೀಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಹೊಸ ಟೆಂಡರ್ ಪ್ರಕ್ರಯೆಯನ್ನು ಕೈಗೊಳ್ಳಲು ಮಂಡಳಿಯ ಸಭೆಯ ಅನುಮೋದನೆ ಕೋರಿದೆ.

**49/19 – ಮಂಡಳಿಗೆ ಅಗತ್ಯವಾದ ಸರಕು ಸಂಗ್ರಹಣೆ ಮತ್ತು ಸೇವೆಗಳ ಪಡೆಯುವ ಬಗ್ಗೆ ಮಂಡಳಿ ಸಮಿತಿಯನ್ನು ರಚಿಸುವ ಬಗ್ಗೆ**

ಮಂಡಳಿಗೆ ದೈನಂದಿನ ಮತ್ತು ವಾರ್ಷಿಕ ಗುರಿ ಸಾಧನೆಗೆ ಅಗತ್ಯವಿರುವ ಸಾಧನ ಸಲಕರಣೆಗಳ ಖರೀದಿಗೆ ಮತ್ತು ಸೇವೆಗಳನ್ನು ಗುತ್ತಿಗೆ/ಹೊರಗುತ್ತಿಗೆ ಮೂಲಕ ಪಡೆಯುವುದು ಅಗತ್ಯವಾಗಿರುತ್ತದೆ. ಈ ಖರೀದಿ/ಸೇವೆಯನ್ನು ಪಡೆಯುವ ಮುನ್ನ ಮಂಡಳಿಯ ಒಂದು ಸಭೆಯಲ್ಲಿ ಚರ್ಚಿಸಿ ನಿರ್ಧರಿಸುವುದು ಅಗತ್ಯವಾಗಿರುತ್ತದೆ. ಈ ಸಮಿತಿಯು ಮಂಡಳಿಯ ಪ್ರಕಾರ್ಯಗಳನ್ನು ಗಮನದಲ್ಲಿಸಿಕೊಂಡು ಅಗತ್ಯ ಸೇವೆಯನ್ನು ಪಡೆಯುವ ಬಗ್ಗೆ ಅಥವಾ ಖರೀದಿಸುವ ಬಗ್ಗೆ ಸೂಕ್ತ ನಿರ್ದೇಶನ/ಸಲಹೆಯನ್ನು ನೀಡಿದಲ್ಲಿ ಮಂಡಳಿಯು ಇನ್ನಷ್ಟು ಸುಗಮವಾಗಿ ಕಾರ್ಯನಿರ್ವಹಿಸಲು ಅನುಕೂಲವಾಗುವ ಹಿನ್ನೆಲೆಯಲ್ಲಿ ಒಂದು **"ಸರಕು ಸಂಗ್ರಹಣೆ ಮತ್ತು ಸೇವೆಗಳ ಸಮಿತಿ"ಯನ್ನು** ಸೃಜಿಸುವುದು ಅಗತ್ಯವಾಗಿರುತ್ತದೆ. ಆದ್ದರಿಂದ ಈ ಕೆಳಕಂಡ ಪರಿಣಿತರ ಸಮಿತಿಯನ್ನು ರಚಿಸಬಹುದಾಗಿರುತ್ತದೆ.

1. ಸದಸ್ಯ ಕಾರ್ಯದರ್ಶಿಗಳು
2. ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು (ಕಂಪಾ)
3. ಉಪ ನಿರ್ದೇಶಕರು (ತೋಟಗಾರಿಕೆ)
4. ತಾಂತ್ರಿಕ ಪರಿಣಿತರು

ಮೇಲಿನ ಸದಸ್ಯರುಗಳನ್ನೊಳಗೊಂಡ ಸರಕು ಸಂಗ್ರಹಣೆ ಮತ್ತು ಸೇವೆಗಳ ಸಮಿತಿಯನ್ನು ರಚಿಸಲು ಮಂಡಳಿಯ ಸಭೆಯ ಅನುಮೋದನೆ ಕೋರಿದೆ.

**49/20 – ಮಂಡಳಿಗೆ ಅಗತ್ಯವಾದ ತಾಂತ್ರಿಕ ಸಮಿತಿಯನ್ನು ರಚಿಸುವ ಬಗ್ಗೆ**

ಮಂಡಳಿಗೆ ಪ್ರಸುತ ಜನತಾ ಜೀವ ವೈವಿಧ್ಯ ದಾಖಲಾತಿ, ಬಿ.ಎಂ.ಸಿ.ಗಳ ತರಬೇತಿ, ಜೀವ ವೈವಿಧ್ಯ ತಾಣಗಳ ಸಂರಕ್ಷಣೆ ಸೇರಿದಂತೆ ವಿವಿಧ ಕಾರ್ಯಗಳನ್ನು ನಿರ್ವಹಿಸುತ್ತಿದ್ದು ಮುಂದಿನ ವರ್ಷಗಳಲ್ಲಿ ಹಮ್ಮಿಕೊಳ್ಳಹುದಾದ ಹೊಸ ಗುರಿಗಳನ್ನು, ಚಿಂತನೆಗಳನ್ನು ಮತ್ತು ಯೋಜನೆಗಳನ್ನು ಸಿದ್ಧಪಡಿಸಿ ವ್ಯಾಪಕವಾಗಿ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮಂಡಳಿಗೆ ಒಂದು ತಾಂತ್ರಿಕ ಸಲಹೆಗಾರರ ಸಮಿತಿ ಅಗತ್ಯವಾಗಿರುತ್ತದೆ. ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದ ನಿರ್ದೇಶನದಂತೆ ಜೀವವೈವಿಧ್ಯತೆಯ ಕಾರ್ಯಯೋಜನೆಯನ್ನು ತಯಾರಿಸಲು ತಜ್ಞರ ಸಮಿತಿ ಅವಶ್ಯಕವಾಗಿರುತ್ತದೆ. ಈ ಸಮಿತಿಯು ಮಂಡಳಿಯು ಪ್ರತಿ ವರ್ಷವೂ ಹಮ್ಮಿಕೊಳ್ಳಬಹುದಾದ ಯೋಜನೆಗಳ ವಿವರ ವಾರ್ಷಿಕ ಗುರಿ ಸಾಧನೆಗೆ ಅಗತ್ಯವಿರುವ ಸಲಹೆ/ನಿರ್ದೇಶನ ನೀಡುವುದು ಅಗತ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಒಂದು **"ತಾಂತ್ರಿಕ ಸಮಿತಿ"ಯನ್ನು** ಸೃಜಿಸುವುದು ಅಗತ್ಯವಾಗಿರುತ್ತದೆ. ತಾಂತ್ರಿಕ ಸಮಿತಿಯ ಸದಸ್ಯರಿಗೆ ರೂ.3000/-ಗಳ ಉಪಸ್ಥಿತಿ ಭತ್ಯೆಯನ್ನು ಸರ್ಕಾರದ ಆದೇಶದಂತೆ ನಿಗಧಿಗೊಳಸಲಾಗಿರುತ್ತದೆ. ತಾಂತ್ರಿಕ ಸಮಿತಿಯ ಅಧ್ಯಕ್ಷರಿಗೆ ರೂ 25,000/-ಗಳ ಮಾಸಿಕ ಭತ್ಯೆಯನ್ನು 1 ವರ್ಷದವರೆಗೆ ನೀಡುವಂತೆ ಈ ಕೆಳಗಿನ ಸದಸ್ಯರನ್ನು ಒಳಗೊಂಡ **"ತಾಂತ್ರಿಕ ಸಮಿತಿ"**ಯನ್ನು ರಚಿಸಲು ಅನುಮೋದನೆ ಕೋರಿದೆ.

1. ನಿವೃತ್ತ ಪಿ.ಸಿ.ಸಿ.ಎಫ್ ಒಬ್ಬರು- ಶ್ರೀ ಅಜಯ್ ಮಿಶ್ರ

2. ಜಿ.ಕೆ.ವಿ.ಕೆಯಿಂದ ಒಬ್ಬರು ತಜ್ಞರು–ಪ್ರೋ. ಎಂ. ನಾರಾಯಣ ಸ್ವಾಮಿ
3. ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು (ಕಾಂಪ) ಜಿ.ಎ. ಸುದರ್ಶನ್ ಐ.ಎಫ್.ಎಸ್.
4. ಅರಣ್ಯ ಇಲಾಖೆಯ ಪ್ರತಿನಿಧಿ–ಒಬ್ಬರು.
5. ಬಿ.ಎಂ.ಸಿ. ಪ್ರತಿನಿಧಿ–ಒಬ್ಬರು

**49/21 – ಮಂಡಳ ಸಮಿತಿ ಸಭೆಗಳಿಗೆ ಹಾಗೂ ಮಂಡಳ ಸಭೆಗಳಿಗೆ ಭಾಗವಹಿಸಲು ಆಗಮಿಸುವ ಸದಸ್ಯರು ಮತ್ತು ಅಧ್ಯಕ್ಷರುಗಳಿಗೆ ಪ್ರಯಾಣ ಭತ್ಯೆ ಮತ್ತು ಇತರೆ ಭತ್ಯೆಗಳನ್ನು ಪಾವತಿಸುವ ಬಗ್ಗೆ**

ಮಂಡಳಿಯ ಸಾಮಾನ್ಯ ಸಭೆಗಳಿಗೆ, ವಿಶೇಷ ಸಭೆಗಳಿಗೆ ಮತ್ತು ಮಂಡಳಿಯ ಇತರೆ ಸಭೆಗಳಿಗೆ ಆಗಮಿಸುವ ಅಧಿಕಾರೇತರ ಸದಸ್ಯರುಗಳಿಗೆ ಪ್ರಯಾಣ ಭತ್ಯೆ ಮತ್ತು ಉಪಸ್ಥಿತಿ ಭತ್ಯೆಗಳನ್ನು ಸರ್ಕಾರದ ಆದೇಶ ಸಂಖ್ಯೆ:ಅಪಜೀ 203 ಇಎನ್‌ವಿ 2016 ಬೆಂಗಳೂರು ದಿನಾಂಕ:25-03-2017ರಂತೆ ಉಪಸ್ಥಿತಿ ಭತ್ಯೆ ರೂ.3000/-ಗಳನ್ನು ಪಾವತಿ ಮಾಡಲಾಗುತ್ತಿರುತ್ತದೆ. ಹಾಗೂ ಕರ್ನಾಟಕ ಜೈವಿಕ ವೈವಿಧ್ಯ ನಿಯಮ 2005ರ ನಿಯಮ 6(2)ರಂತೆ " ಮಂಡಳಿಯ ಸಭೆಗೆ ಹಾಜರಾಗುವ ಪ್ರತಿಯೊಬ್ಬ ಅಧಿಕಾರೇತರ ಸದಸ್ಯನು, ಸಮಿತಿಗಳು, ಆಯೋಗಗಳು ಅಥವಾ ಇತರೆ ಸಂಸ್ಥೆಗಳ ಅಧಿಕಾರೇತರ ಸದಸ್ಯರುಗಳಿಗೆ ನೀಡುವ **ಪ್ರವಾಸ ಭತ್ಯೆ ನಿಯಮಗಳು–2001** ಹಾಗೂ ಕಾಲಕಾಲಕ್ಕೆ ಪರಿಷ್ಕರಣೆಗೊಳ್ಳುವಷ್ಟು ಉಪವೇಶನ ಭತ್ಯೆ, ಪ್ರಯಾಣ ಭತ್ಯೆ, ದಿನಭತ್ಯೆ, ಮತ್ತು ಇಂಥಹ ಇತರೆ ಭತ್ಯೆಗಳನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು ಎಂದು ತಿಳಿಸಲಾಗಿದೆ.

ಆರ್ಥಿಕ ಸಚಿವಾಲಯದ ಅಧಿಸೂಚನೆ ಸಂಖ್ಯೆ: ಆಇ 3 ಸನಿತಿ 2015 ಬೆಂಗಳೂರು, ದಿ: 03-08-2015ರಂತೆ ಮೇಲೆ ಉಲ್ಲೇಖಿಸಿದ **ಪ್ರವಾಸ ಭತ್ಯೆ ನಿಯಮಗಳು–2001**ನ್ನು ರದ್ದುಪಡಿಸಿ **"ಪ್ರಯಾಣ ಭತ್ಯೆ ಸಂದಾಯ ಮಾಡುವ (ಸಮಿತಿ, ಆಯೋಗ, ಅಥವಾ ಇತರೆ ಸಂಸ್ಥೆಗಳ ಅಧಿಕಾರೇತರ ಸದಸ್ಯರುಗಳಿಗೆ) ನಿಯಮಗಳು–2015**"ನ್ನು ಜಾರಿಗೆ ತಂದಿರುತ್ತದೆ.

ಅದರಂತೆ ಮಂಡಳಿಯ ಸಾಮಾನ್ಯ ಸಭೆಗಳಿಗೆ, ವಿಶೇಷ ಸಭೆಗಳಿಗೆ ಮತ್ತು ಮಂಡಳಿಯ ಇತರೆ ಸಭೆಗಳಿಗೆ ಆಗಮಿಸುವ ಅಧಿಕಾರೇತರ ಸದಸ್ಯರುಗಳಿಗೆ ಪ್ರಯಾಣ ಭತ್ಯೆ ಮತ್ತು ಉಪಸ್ಥಿತಿ ಭತ್ಯೆಗಳನ್ನು ಸರ್ಕಾರದ ಆದೇಶ ಸಂಖ್ಯೆ:ಅಪಜೀ 203 ಇಎನ್‌ವಿ 2016 ಬೆಂಗಳೂರು ದಿನಾಂಕ:25-03-2017ರಂತೆ ಉಪಸ್ಥಿತಿ ಭತ್ಯೆ ರೂ.3000/-ಗಳನ್ನು ಪಾವತಿಮಾಡಲು ಹಾಗೂ **"ಪ್ರಯಾಣ ಭತ್ಯೆ ಸಂದಾಯ ಮಾಡುವ (ಸಮಿತಿ, ಆಯೋಗ, ಅಥವಾ ಇತರೆ ಸಂಸ್ಥೆಗಳ ಅಧಿಕಾರೇತರ ಸದಸ್ಯರುಗಳಿಗೆ) ನಿಯಮಗಳು–2015**"ರಂತೆ ಪ್ರಯಾಣ ಭತ್ಯೆ ಮತ್ತು ಇತರೆ ಭತ್ಯೆಗಳನ್ನು ಪಾವತಿ ಮಾಡಲು ಮಂಡಳಿಯ ಸಭೆಯ ಅನುಮೋದನೆ ಕೋರಿದೆ.

**49/22 – ಫಾರಂ–1ರ ಮೂಲಕ ಸಂಗ್ರವಾಗುವ ಮೊತ್ತವನ್ನು ಮಂಡಳಿಯ ಆಡಳಿತಾತ್ಮಕ ವೆಚ್ಚಗಳಿಗೆ ಬಳಸಿಕೊಳ್ಳುವ ಬಗ್ಗೆ ಮತ್ತು ಈ ಸಂಬಂಧ ಮಂಡಳಿಯ ಬ್ಯಾಂಕ್ ಖಾತೆ ಸಂಖ್ಯೆಯನ್ನು ಮಂಡಳಿಯ ಸ್ವಂತ ನಿಧಿಯ ಖಾತೆಯನ್ನಾಗಿ ಬದಲಾಯಿಸುವ ಬಗ್ಗೆ**

ಮಂಡಳಿಯು ಫಾರಂ–1ರ ಮೂಲಕ ಸಂಗ್ರಹವಾಗುವ ಮೊತ್ತವನ್ನು ಕೆನರಾ ಬ್ಯಾಂಕ್ ಮಲ್ಲೇಶ್ವರಂ ಶಾಖೆಯಲ್ಲಿ ಖಾತೆ ಸಂಖ್ಯೆ:04962010012455ರಲ್ಲಿ ಜಮಾ ಮಾಡುತ್ತಾ ಬರಲಾಗುತ್ತಿದೆ. ಈ ಬಗ್ಗೆ ಯಾವುದೇ ನಿರ್ದೇಶನ/ಮಾರ್ಗಸೂಚಿಗಳು ಇಲ್ಲದೆ ಇದ್ದುದರಿಂದ ಈ ಖಾತೆಯಲ್ಲಿ ಸಂಗ್ರಹವಾದ

ಮೊತ್ತವನ್ನು ಇದುವರೆವಿಗೂ ಬಳಕೆ ಮಾಡದೇ ಹಾಗೇಯೇ ಉಳಸಿಕೊಳ್ಳಲಾಗಿತ್ತು. ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರವು ದಿನಾಂಕ:03-12-2021ರ ಇ-ಮೇಲ್‌ನ ಮೂಲಕ ಮಂಡಳಿಯ ಎ.ಬಿ.ಎಸ್ ತಜ್ಞರ ಸಭೆಯಲ್ಲಿ ಹಾಗೂ ಮಂಡಳಿಯ ಸಭೆಯ ಅನುಮೋದನೆ ಪಡೆದು ಫಾರಂ-1ರ ಮೂಲಕ ಸಂಗ್ರಹವಾಗುವ ಮೊತ್ತವನ್ನು ಮಂಡಳಿಯ ಆಡಳಿತಾತ್ಮಕ ವೆಚ್ಚಗಳಿಗೆ ಬಳಸಿಕೊಳ್ಳಬಹುದೆಂದು ಅಭಿಪ್ರಾಯ ನೀಡಿರುತ್ತದೆ. ಹಾಗೆಯೇ ಎ.ಬಿ.ಎಸ್. ಮೊತ್ತ ಶೇ.5ರಷ್ಟು ಭಾಗವನ್ನು ಆಡಳಿತಾತ್ಮಕ ವೆಚ್ಚಗಳಿಗೆ ಬಳಸಿಕೊಳ್ಳಲು ಎ.ಬಿ.ಎಸ್. ಕಾಯ್ದೆ-2014ರಲ್ಲಿನ ವಿನಿಮಯ15(2)ರ ಮೂಲಕ ರಾಜ್ಯ ಜೀವವೈವಿಧ್ಯ ಮಂಡಳಿಗಳಿಗೆ ಅವಕಾಶ ಮಾಡಿಕೊಡಲಾಗಿರುತ್ತದೆ. **(ಅನುಬಂಧ-18) (248-249)** ಆದ್ದರಿಂದ

1. ಕೆನರಾ ಬ್ಯಾಂಕ್ ಮಲ್ಲೇಶ್ವರಂ ಶಾಖೆಯಲ್ಲಿ ಖಾತೆ ಸಂಖ್ಯೆ:04962010012455ಯನ್ನು ಮಂಡಳಿಯ ಸ್ವಂತ ನಿಧಿಯ ಖಾತೆಯನ್ನಾಗಿ ಉಪಯೋಗಿಸುವ ಬಗ್ಗೆ.
2. ಫಾರಂ-1ರ ಮೂಲಕ ಇದುವರೆವಿಗೂ ಸಂಗ್ರಹವಾಗಿರುವ ಮತ್ತು ಭವಿಷ್ಯದಲ್ಲಿ ಸಂಗ್ರಹವಾಗುವ ಮೊತ್ತವನ್ನು ಮಂಡಳಿಯ ಆಡಳಿತಾತ್ಮಕ ವೆಚ್ಚಗಳಿಗೆ ಬಳಸಿಕೊಳ್ಳಲು.
3. ಎ.ಬಿ.ಎಸ್. ಮೂಲಕ ಸಂಗ್ರಹವಾಗುವ ಮೊತ್ತ ಶೇ.5ರಷ್ಟು ಭಾಗವನ್ನು ಈ ಖಾತೆಗೆ ಪ್ರತಿ ಮಾಹೆಯು ಜಮಾ ಮಾಡುವುದು ಹಾಗೂ ಇದನ್ನು ಕೂಡ ಮಂಡಳಿಯ ಆಡಳಿತಾತ್ಮಕ ವೆಚ್ಚಗಳಿಗೆ ಬಳಸಿಕೊಳ್ಳಲು.
4. ಈ ಸಂಬಂಧದ ಎಲ್ಲಾ ಲೆಕ್ಕ ಪತ್ರಗಳನ್ನು ಮಂಡಳಿಯ ಆಡಳಿತಾತ್ಮಕ ವೆಚ್ಚಗಳ ನಿಧಿಯೆಂದು ನಿರ್ವಹಣೆ ಮಾಡಲು

ಮೇಲಿನ ನಾಲ್ಕು ಅಂಶಗಳನ್ನು ಕಾರ್ಯರೂಪಕ್ಕೆ ತರಲು ಮಂಡಳಿಯ ಸಭೆಯ ಅನುಮೋದನೆ ಕೋರಿದೆ.

**49/23 – ಮಂಡಳಿಯ 2020-21ನೇ ಸಾಲಿನ ವಾರ್ಷಿಕ ಲೆಕ್ಕಗಳನ್ನು ಅನುಮೋದಿಸುವ ಬಗ್ಗೆ.**

ಕರ್ನಾಟಕ ಜೀವವೈವಿಧ್ಯ ಮಂಡಳಿಯ 2020-21ನೇ ಸಾಲಿನ ವಾರ್ಷಿಕ ಲೆಕ್ಕಗಳನ್ನು ಸಿದ್ಧಪಡಿಸಿ ಶಾಸನಬದ್ಧ ಲೆಕ್ಕ ಪರಿಶೋಧಕರಾದ (chartered accountant) ಶ್ರೀ ರಾಮ್‌ಕುಮಾರ್ &ಕೋ., ರವರಿಂದ ಲೆಕ್ಕ ಪರಿಶೋಧನೆಗೆ ಒಳಪಡಿಸಲಾಗಿದೆ. ಹಾಗೂ ಲೆಕ್ಕ ಪರಿಶೋಧನೆಯ ಅವಧಿಯಲ್ಲಿನ ನ್ಯೂನತೆಗಳನ್ನು ಸರಿಪಡಿಸಿ, ಶಾಸನಬದ್ಧ ಲೆಕ್ಕ ಪರಿಶೋಧಕರಾದ ಶ್ರೀ ರಾಮ್‌ಕುಮಾರ್ &ಕೋ., ರವರಿಂದ ದೃಢಿಕರಣವನ್ನು ಪಡೆಯಲಾಗಿರುತ್ತದೆ. ಹಾಗಾಗಿ ಕರ್ನಾಟಕ ಜೀವ ವೈವಿಧ್ಯ ಮಂಡಳಿಯ 2020-21ನೇ ಸಾಲಿನ ವಾರ್ಷಿಕ ಲೆಕ್ಕಗಳನ್ನು ಮಂಡಳಿಯ ಅನುಮೋದನೆಗೆ ಸಲ್ಲಿಸಿದೆ. **(ಅನುಬಂಧ-19) (250-269)**

**49/24 – ಮಂಡಳಿಯ ಲೆಕ್ಕ ಶಾಖೆಯಲ್ಲಿನ ಕೆಲಸ ಕಾರ್ಯಗಳನ್ನು ಮರು ವಿನ್ಯಾಸಗೊಳಿಸುವ ಬಗ್ಗೆ,**

ಕರ್ನಾಟಕ ಜೀವವೈವಿಧ್ಯ ಮಂಡಳಿಯ 2020-21ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನೆಗೆ ಒಳಪಡಿಸಲಾದ ಸಂದರ್ಭದಲ್ಲಿ ಕೆಲವು ನ್ಯೂನತೆಗಳು ಕಂಡುಬಂದಿರುತ್ತವೆ. ಶಾಸನಬದ್ಧ ಲೆಕ್ಕ ಪರಿಶೋಧಕರಾದ (chartered accountant) ಶ್ರೀ ರಾಮ್‌ಕುಮಾರ್ &ಕೋ., ರವರೊಂದಿಗೆ ವಿವರವಾಗಿ ಚರ್ಚಿಸಲಾಗಿ, ಮಂಡಳಿಯ ಲೆಕ್ಕ ಪತ್ರಗಳಲ್ಲಿ ಈ ಕೆಳಕಂಡ ವಿನ್ಯಾಸಗಳು ಮತ್ತು ಬದಲಾವಣೆಗಳು

ಅಗತ್ಯವಾಗಿರುತ್ತವೆ. ಲೆಕ್ಕ ಶಾಖೆಯ ಕೆಲಸ ಕಾರ್ಯಗಳು ಸುಗಮವಾಗಿ ಮತ್ತು ವ್ಯವಸ್ಥಿತವಾಗಿ ಜರುಗಲು ಕೆಲವು ಮಾರ್ಪಾಡುಗಳು ಅಗತ್ಯವಾಗಿರುತ್ತವೆ.

1. ಮಂಡಳಿಯ ಲೆಕ್ಕ ಕೈಪಿಡಿ (Mannual of Accounts)
2. ಮಂಡಳಿಯ ಲೆಕ್ಕಗಳ ವಿನ್ಯಾಸ (Chart of accounts)
3. ಪ್ಯಾನ್ ಕಾರ್ಡನ ಬದಲಾವಣೆ (Change of PAN card)
4. ತೆರಿಗೆ ವಿನಾಯಿತಿ (Exemption from Income Tax)
5. ಸರಕು ಮತ್ತು ಸೇವಾ ತೆರಿಗೆ ಇಲಾಖೆಯ ಸಂಖ್ಯೆಗಳ ಬದಲಾವಣೆ (Change of GST and GSTTDS Number)
6. ಇತರೆ ಅವಶ್ಯಕ ಕಾರ್ಯಗಳು

ಮೇಲಿನ ಕಾರ್ಯಗಳನ್ನು ಈ ಆರ್ಥಿಕ ವರ್ಷದಲ್ಲಿ ಮುಕ್ತಾಯಗೊಳಿಸಿ 2022-23ನೇ ಸಾಲಿನ ಆರ್ಥಿಕ ವರ್ಷದಿಂದ ಜಾರಿಗೊಳಿಸುವುದು ಅಗತ್ಯವಾದ ಹಿನ್ನೆಲೆಯಲ್ಲಿ ಮೇಲಿನ ಕಾರ್ಯ ಕ್ರಮಗಳನ್ನು ತುರ್ತಾಗಿ ಹಮ್ಮಿಕೊಳ್ಳುವ ಬಗ್ಗೆ ಮತ್ತು ಈ ಸಂಬಂಧ ತಗಲುವ ವೆಚ್ಚವನ್ನು ಮಂಡಳಿಯ ನಿಧಿಯಿಂದ ಭರಿಸುವ ಬಗ್ಗೆ ಅನುಮೋದನೆ ಕೋರಿದೆ.

**49/25 – ಕರ್ನಾಟಕ ಜೀವವೈವಿಧ್ಯ ಮಂಡಳಿಯ 2021-22ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಕುರಿತು**

ಕರ್ನಾಟಕ ಜೀವವೈವಿಧ್ಯ ಮಂಡಳಿಯ 2021-22ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಿ ಮಂಡಳಿ ಸಭೆಯ ಅನುಮೋದನೆ ಪಡೆದು ಅದನ್ನು ಕಾರ್ಯರೂಪಕ್ಕೆ ತರಬೇಕಾಗಿರುತ್ತದೆ. ಮಂಡಳಿಯ ವಿಶೇಷ ಲೆಕ್ಕಪರಿಶೋಧನಾ ತಂಡವು ಇದನ್ನು ಉಲ್ಲೇಖಿಸಿ ಚರ್ಚಿಸಿದ್ದು ಅದರಂತೆ ಮಂಡಳಿಯ 2021-22ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು **(ಅನುಬಂಧ-20)** ರಲ್ಲಿ ಅಡಕವಿರಿಸಲಾಗಿದೆ.

ಈ ವಿಷಯವನ್ನು ಮಂಡಳಿ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**49/26 – ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸ್ವೀಕೃತಿ ಮತ್ತು ವೆಚ್ಚಗಳ ಕುರಿತು**

ಕರ್ನಾಟಕ ಜೀವವೈವಿಧ್ಯ ಮಂಡಳಿಯ 2021-22ನೇ ಸಾಲಿನ ಡಿಸೆಂಬರ್ 2021ರ ಅಂತ್ಯದವರೆಗೆ ಸರ್ಕಾರದಿಂದ ಸ್ವೀಕೃತವಾದ ಅನುದಾನ ಮತ್ತು ಈ ಅನುದಾನವನ್ನು ಬಳಸಿಕೊಂಡು ಮಾಡಲಾದ ವೆಚ್ಚದ ತಂ:ಖ್ತೆಯನ್ನು **(ಅನುಬಂಧ-21)** ರಲ್ಲಿ ಲಗತ್ತಿಸಲಾಗಿದೆ.

ಈ ವಿಷಯವನ್ನು ಮಂಡಳಿ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

| | |
|---|---|
| **ಸಹಿ/-**<br>**ಅಧ್ಯಕ್ಷರು**<br>**ಕರ್ನಾಟಕ ಜೀವವೈವಿಧ್ಯ ಮಂಡಳಿ** | **ಸಹಿ/-**<br>**ಸದಸ್ಯ ಕಾರ್ಯದರ್ಶಿ**<br>**ಕರ್ನಾಟಕ ಜೀವವೈವಿಧ್ಯ ಮಂಡಳಿ** |

**ಹೆಚ್ಚುವರಿ ಕಾರ್ಯಸೂಚಿಗಳು ಅಧ್ಯಕ್ಷರ ಅನುಮೋದನೆ ಮೇರೆಗೆ**

**49-27 – ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರವು ಭಾರತೀಯ ಜೀವವೈವಿಧ್ಯ ಪ್ರಶಸ್ತಿ-2023ಕ್ಕೆ ಅರ್ಜಿಯನ್ನು ಆಹ್ವಾನಿಸಿರುವ ಬಗ್ಗೆ.**

ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರವು ಭಾರತೀಯ ಜೀವವೈವಿಧ್ಯ ಪ್ರಶಸ್ತಿ-2023ಕ್ಕೆ ಅರ್ಜಿಯನ್ನು ಆಹ್ವಾನಿಸಿರುತ್ತದೆ. ಜನತಾ ಜೀವವೈವಿಧ್ಯ ದಾಖಲಾತಿ, ಜೀವವೈವಿಧ್ಯ ನಿರ್ವಹಣಾ ಸಮಿತಿ, ಜೈವಿಕ ಸಂಪನ್ಮೂಲಗಳ ಬಳಕೆ, ಲಾಭ ಮತ್ತು ನ್ಯಾಯಸಮ್ಮತ ಹಂಚಿಕೆ ಮತ್ತು ಪರಿಸರ ಸಂರಕ್ಷಣೆ ವಿಭಾಗಗಳಲ್ಲಿ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿದ್ದು, ಮಂಡಳಿಯಿಂದ ಈ ಕೆಳಗಿನಂತೆ ನಾಲ್ಕು ವಿಭಾಗಗಳಲ್ಲಿ ನಾಮನಿರ್ದೇಶನಗೊಳಿಸಲು ಕ್ರಮಕೈಗೊಳ್ಳಲಾಗಿದೆ.

**ನಾಮ ನಿರ್ದೇಶಿತರ ವಿವರ**

| | **ವಿಭಾಗ** | | | |
|---|---|---|---|---|
| | **ಪಿಬಿಆರ್** | **ಬಿಎಂಸಿ** | **ಎಬಿಎಸ್** | **ಸಂರಕ್ಷಣೆ** |
| | 1. ಉಡುಪಿ ಜಿಲ್ಲಾ ಪಂಚಾಯಿತಿ-ಸಂಯೋಜಕರು : ಪ್ರೋ.ಸುನೀಲ್ ನೌಟಿಯಾಲ್<br>2. ಶೃಂಗೇರಿ ತಾಲ್ಲೂಕು ಪಂಚಾಯಿತಿ – ಸಂಯೋಜಕರು : ಡಾ.ಕುಮಾರ ಸ್ವಾಮಿ ಉಡುಪ | 1. ಹಂಪಿ ಗ್ರಾಮ ಪಂಚಾಯಿತಿ<br>2.ನಲ್ಲೂರು ಗ್ರಾಮ ಪಂಚಾಯಿತಿ | 1. ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ (KS&DL)<br>2. Phalada Agro Research Foundation Pvt. Ltd.<br>3. Madhur Pharma & Research Laboratories Pvt. Ltd. | |

ಈ ವಿಷಯವನ್ನು ಮಂಡಳಿಯ ಮಾಹಿತಿ ಮತ್ತು ಅನುಮೋದನೆಗಾಗಿ ಮಂಡಿಸಿದೆ.

**49-28 – ಕರ್ನಾಟಕ ಜೀವವೈವಿಧ್ಯ ಮಂಡಳಿಯ ವಾರ್ಷಿಕ ವರದಿ 2020-21 ಹಾಗೂ ಲೆಕ್ಕ ಪರಿಶೋಧನಾ ವರದಿ 2019-2020:**

ಕರ್ನಾಟಕ ಜೀವವೈವಿಧ್ಯ ಮಂಡಳಿಯ 2020-21ನೇ ಸಾಲಿನ ವಾರ್ಷಿಕ ವರದಿ ಹಾಗೂ 2019-2020ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿದ್ದು ಅದರ ಹಾರ್ಡ್ ಮತ್ತು ಸಾಫ್ಟ್ ಪ್ರತಿಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಈ ವಿಷಯವನ್ನು ಸಭೆಯ ಮಾಹಿತಿಗಾಗಿ ಮಂಡಿಸಲಾಗಿದೆ.

**49–29 – ತರಬೇತಿ ಕೈಪಿಡಿ (Training Manual)**

ಕರ್ನಾಟಕ ರಾಜ್ಯ ಔಷಧಿ ಗಿಡಮೂಲಿಕಾ ಪ್ರಾಧಿಕಾರ ಹಾಗೂ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸಹಯೋಗದೊಂದಿಗೆ ಔಷಧೀಯ ಗಿಡಗಳ ಸಂರಕ್ಷಣೆ, ಅಭಿವೃದ್ಧಿ, ಸುಸ್ಥಿರ ನಿರ್ವಹಣೆ, ಜೀವವೈವಿಧ್ಯ ಸಂರಕ್ಷಣೆ ಮತ್ತು ಜೈವಿಕವೈವಿಧ್ಯ ಅಧಿನಿಯಮ 2002ನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಸದಸ್ಯರಿಗೆ, ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಹಾಗೂ ಇತರೆ ಇಲಾಖಾ ಅಧಿಕಾರಿಗಳಿಗೆ ತರಬೇತಿ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುತ್ತಿದೆ. ಕಾರ್ಯಾಗಾರಕ್ಕೆ ಸಂಬಂಧಪಟ್ಟಂತೆ Training Manualನ್ನು ತಯಾರಿಸಿ **(ಅನುಬಂಧ–22)**ರಲ್ಲಿ ಲಗತ್ತಿಸಲಾಗಿದೆ.

ಈ ವಿಷಯವನ್ನು ಮಂಡಳಿಯ ಅನುಮೋದನೆಗಾಗಿ ಮಂಡಿಸಿದೆ.

**ಸಹಿ/–**
**ಸದಸ್ಯ ಕಾರ್ಯದರ್ಶಿ**
**ಕರ್ನಾಟಕ ಜೀವವೈವಿಧ್ಯ ಮಂಡಳಿ**